ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 261 RNI Number : KNKAN/25/A2770 04-10-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ:261 ರಾಯಚೂರು 04-10-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಅರಕ್ಷಕ ಬಸವರಾಜ ನಾಯಕ ವರ್ಗಾವಣೆ ಒತ್ತಾಯ

ರಾಯಚೂರು,ಅ.3-ನೇತಾಜಿ ನಗರ ಪೊಲೀಸ್ ಠಾಣೆಯ ಅರಕ್ಷಕ ಉಪನಿರೀಕ್ಷಕರಾದ ಬಸವರಾಜ ನಾಯಕ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಿ ವರ್ಗಾವಣೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ಮಾದಿಗ ಸಂಘದ ಮುಖಂಡರು ಎಸ್ಪಿಗೆ ಮನವಿ ಸಲ್ಲಿಸಿ ಒತ್ತಾಯಿಸಿದೆ.




ಸಿ.ಯಲ್ಲಪ್ಪ ಅವರು ದಿ. 29 ರಂದು ಸಂಜೆ 7 ಗಂಟೆ ಸುಮಾರಿಗೆ ಸಮಾಜದ ಯುಕವರನ್ನು ಡಿಜೆ ಸೌ ಬಳಿಸಿದ ಕಾರಣ, ಠಾಣೆಯಲ್ಲಿ ಬೆಳಿಗೆ, 9 ರಿಂದ ರಾತ್ರಿ 7 ಗಂಟೆಯವರೆಗೆ ಕೂಡಿಸಿದ ವಿಚಾರಣೆ ಮಾಡಲು ಹೋದಾಗ, ಠಾಣಾಧಿಕಾರಿಗಳಾದ ಬಸವರಾಜ ನಾಯಕ ಅವರು ತನ್ನ ಜೊತೆ ಅಸಭ್ಯವಾಗಿ ವರ್ತಿಸಿ, ಹೇ ಠಾಣೆಯಿಂದ ಹೊರಗೆ ಹೋಗು ಎಂದು ಅವಮಾನಗೊಳಿಸಿದರು. ಈ ಬಗ್ಗೆ, ನಾನು ಪೊಲೀಸ್ ಠಾಣೆಯು ಸಾರ್ವಜನಿಕ ಕಛೇರಿಯಾಗಿದ್ದು ವಿನಾಃಕಾರಣ, ಯುವಕರನ್ನು ಠಾಣೆಯಲ್ಲಿ ಕೂಡಿಸುವದರ ಬಗ್ಗೆ ಕೇಳಲು ಬಂದಿದ್ದೇನೆಂದು ಹೇಳಿದರೂ ಸಹ ಮೊದಲು ಹೊರಗೆ ಹೋಗಿ ಎಂದು ಹೇಳಿದರು. ಈ ಸಂದರ್ಭದಲ್ಲಿ ಠಾಣೆಯಲ್ಲಿ ಪೋಲಿಸರು ದೌರ್ಜನ್ಯವಾಗಿ ಕೂಡಲು ಹೇಳಿದರು. ಆಗ ಆರಕ್ಷಕ ಉಪನರೀಕ್ಷಕರು, ಶ್ರೀ ಬಸವರಾಜ ನಾಯಕ ಅವರನ್ನು ಏಕೆ ಕೂಡಿಸುತ್ತೀರಿ ಎಂದು ಏಕವಚನದಲ್ಲಿ ಪೋಲಿಸರಿಗೆ ಬೈದು ಹೇಳಿದನು. ಇದು ಅವರ ಅಸಭ್ಯ ವರ್ತನೆ ಅಶಿಸ್ತು ವರ್ತನೆಯಿಂದ ಮಾಡಿರುತ್ತಾರೆ ನಾನೊಬ್ಬ ಎರಡು ಭಾರಿ ನಗರ ಸಭೆ ಸದಸ್ಯರಾಗಿ ಇದ್ದವರಿಗೆ ಈ ರೀತಿ ವರ್ತನೆ ಮಾಡಿ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡರೆ, ಜನಸಾಮಾನ್ಯರ ಸ್ಥಿತಿ ಹೇಗಿರುತ್ತದೆಂದು ತಮ್ಮ ಆಲೋಚನೆಗೆ ಬಿಟ್ಟಿದ್ದು ಇರುತ್ತದೆ. ಪೋಲಿಸ್ ಠಾಣೆಗೆ ಬರುವ ಎಲ್ಲಾ ಸಾರ್ವಜನಿಕರಿಗೂ ನಿಂದಿಸುವುದು ಮತ್ತು ಅಶಿಸ್ತು ವರ್ತನೆ ಮಾಡುವುದು ಸಾಮಾನ್ಯವಾಗಿದೆ. ಅದರಲ್ಲಿ ವಿಶೇಷವಾಗಿ ಮಾದಿಗ ಸಮಾಜದವರು ಬಂದರೆ, ಇನ್ನೂ ಹೆಚ್ಚಿನ ರೀತಿಯಲ್ಲಿ ನಿಂದಿಸುವುದು ಆಶಿಸ್ತು ವರ್ತನೆ ಮಾಡುತ್ತಾರೆ. ಆದೇ ಠಾಣೆಗೆ ಬರುವ ಸಾರ್ವಜನಿಕರಲ್ಲಿ ದೂರು ಮತ್ತು ಇನ್ನಿತರ ಕಾರ್ಯಗಳಿಗೆ ನೇರವಾಗಿ ಹಣ ವಸೂಲಿ ಮಾಡುತ್ತಿದ್ದಾರೆ ಎಂದು ದೂರಿದರು.ಹಣ ನೀಡಿದವರಿಗೆ ಮಾತ್ರ ಕೆಲಸ ಮಾಡುತ್ತಾನೆ ಎಂದು ಹೇಳಿಕೆ ನೀಡಿದ್ದಾರೆ. ಪೋಲಿಸ್ ಕಾಯ್ದೆಯ ನಿಯಮಾನುಸಾರ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಮತ್ತು ನೇತಾಜಿ ಪೋಲಿಸ್ ಠಾಣೆಯಿಂದ ವರ್ಗಾವಣೆಗೆ ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಸಿ ಯಲ್ಲಪ್ಪ, ನರಸಪ್ಪ ದಂಡೋರ, ಅನೇಕರು ಉಪಸ್ಥಿತರಿದ್ದರು.

ಅ.5ರಂದು ರಾಯಚೂರಿನಲ್ಲಿ ಪ್ರಾಜೆಕ್ಟ್ ಪಂಚತಂತ್ರ ನಾಟಕ ಪ್ರದರ್ಶನ

ರಾಯಚೂರು: ರಂಗ ಕನಸು ರಂಗ ಕೇಂದ್ರ (ರಿ.) ಮಂಡಲಗೇರಾ ಆಯೋಜಿಸುವ ಹಾಗೂ ನಿರ್ದಿಗಂತ ಪ್ರಸ್ತುತಪಡಿಸುವ ಪ್ರಾಜೆಕ್ಟ್ ಪಂಚತಂತ್ರ ಎಂಬ ವಿಭಿನ್ನ ನಾಟಕ ಅ. 5ರಂದು ಸೋಮವಾರ ಸಂಜೆ 6 ಗಂಟೆಗೆ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ ಎಂದು ರಂಗ ಕನಸು ಸಂಸ್ಥೆಯ ಕಾರ್ಯದರ್ಶಿ ಹಾಗೂ ರಂಗ ಸಂಘಟಕ ಲಕ್ಷ್ಮಣ ಮಂಡಲಗೇರಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಜೆಕ್ಟ್ ಪಂಚತಂತ್ರ ನಾಟಕವು ಪಂಚತಂತ್ರದ ಪುರಾತನ ಕಥೆಗಳು ಇಂದಿನ ಬದುಕಿನೊಂದಿಗೆ ಸಂವಾದ ನಡೆಸುವ ವಿಭಿನ್ನ ರಂಗ ಪ್ರಯೋಗವಾಗಿದೆ. ಇದು ಕೇವಲ ನಾಟಕವಲ್ಲ, ಒಂದು



ಪ್ರಕ್ರಿಯೆಯಾಗಿದ್ದು, ನಟರು ತಮ್ಮ ಕಸುಬನ್ನು ಮೆರೆಸುವುದರ ಜೊತೆಗೆ ಸೃಷ್ಟಿಯ ಪಯಣವನ್ನು ಪ್ರೇಕ್ಷಕರ ಮುಂದೆಯೇ ಬಿಚ್ಚಿಡುವ ಪ್ರಯತ್ನ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಮೂಲ ಪಂಚತಂತ್ರದ ಕಥೆಗಳನ್ನು ಸಮಕಾಲೀನಗೊಳಿಸಿ ಪ್ರಖ್ಯಾತ ಮಲಯಾಳಿ ರಂಗ ನಿರ್ದೇಶಕ ಅರುಣ್ ಲಾಲ್ ಅವರು ರಂಗಪಠ್ಯ ರಚಿಸಿ ನಿರ್ದೇಶಿಸಿದ್ದಾರೆ. ಸಂಗೀತ ನಿರ್ದೇಶನವನ್ನು ಅನುಷ್ ಶೆಟ್ಟಿ ಅವರು ಮಾಡಿದ್ದಾರೆ. ನಾಟಕವು ಹೊಸದಾದ ಹಾಗೂ ವಿಭಿನ್ನ ಲೋಕದ ಅನುಭವವನ್ನು ನೀಡಲಿದೆ ಎಂದು ಅವರು ತಿಳಿಸಿದ್ದಾರೆ.

ಇಂತಹ ಅಪರೂಪದ ರಂಗ ಪ್ರಯೋಗವೊಂದು ರಾಯಚೂರು ನಗರದಲ್ಲಿ ಪ್ರದರ್ಶನಗೊಳ್ಳುತ್ತಿರುವುದು ವಿಶೇಷವಾಗಿದ್ದು, ರಂಗಾಸಕ್ತರು ಬಿಡುವು ಮಾಡಿಕೊಂಡು ರಂಗಮಂದಿರಕ್ಕೆ ಆಗಮಿಸಿ ನಾಟಕವನ್ನು ವೀಕ್ಷಿಸಬೇಕು ಎಂದು ಮನವಿ ಮಾಡಿದ್ದಾರೆ.

ಇತ್ತೀಚೆಗೆ ಅಗಲಿದ ತಮ್ಮ ರಂಗಗುರು ಹಾಗೂ ರಂಗ ನಿರ್ದೇಶಕ ಚಿದಂಬರರಾವ ಜಂಬೆ ಅವರಿಗೆ ಈ ನಾಟಕ ಪ್ರಯೋಗವನ್ನು ಸಮರ್ಪಿಸಲಾಗುತ್ತಿದೆ. ನಾಟಕಕ್ಕೆ ಉಚಿತ ಪ್ರವೇಶವಿದ್ದು, ರಾಯಚೂರಿನ ರಂಗಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರದರ್ಶನವನ್ನು ವೀಕ್ಷಿಸಬೇಕು ಎಂದು ಪ್ರಕಟಣೆಯಲ್ಲಿ ಕೋರಲಾಗಿದೆ.

ಪತ್ರಕರ್ತರ ಜಿಲ್ಲಾ ಮಟ್ಟದ ಕ್ರಿಕೆಟ್ ಪಂದ್ಯಾವಳಿಗೆ : ಬೋಸರಾಜು ಚಾಲನೆ

ಸಮಾಜಮುಖಿ ಕಾರ್ಯದಲ್ಲಿ ಪತ್ರಕರ್ತರ ಪಾತ್ರ ಮಹತ್ವದ್ದು

ರಾಯಚೂರು,ಅ.03-

ರಿಪೋರ್ಟರ್ಸ್ ಗಿಲ್ಡ್ ತನ್ನ ಬೆಳ್ಳಿ ಮಹೋತ್ಸವವನ್ನ ಕ್ರಿಯಾಶೀಲವಾಗಿ , ಜನಪರ, ಸಾಮಾಜಿಕ ಉತ್ಸವದ ರೀತಿ ಅರ್ಥಪೂರ್ಣವಾಗಿ ಆಚರಿಸುತ್ತಿರುವುದು ಶ್ಲಾಘನೀಯ ಅಂತ ಮಾಜಿ ಸಚಿವ, ವಿಧಾನ ಪರಿಷತ್ ಶಾಸಕರಾದ ಎನ್ ಎಸ್.ಬೋಸರಾಜು ಹೇಳಿದ್ದಾರೆ.



ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಬೆಳ್ಳಿ ಮಹೋತ್ಸವದ ಅಂಗವಾಗಿ ನಗರದ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿಶನಿವಾರ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಎನ್.ಎಸ್.ಬೋಸರಾಜು

ಈ ತಿಂಗಳ ಅಂತ್ಯದಲ್ಲಿ ನಡೆಯುವ ಬೆಳ್ಳಿ ಮಹೋತ್ಸವ ಕಾರ್ಯಕ್ರಮ ಅರ್ಥಪೂರ್ಣವಾಗಿ ಆಚರಿಸಲು ಎಲ್ಲಾ ಸಹಕಾರ ನೀಡುವುದಾಗಿ ತಿಳಿಸಿದರು. ಇನ್ನೂ ಮುಂದಿನ ದಿನಗಳಲ್ಲಿ ರಾಯಚೂರಿನಲ್ಲಿ ನಡೆಯಲಿರುವ ಪತ್ರಕರ್ತರ ರಾಜ್ಯ ಮಟ್ಟದ ಸಮ್ಮೇಳನವನ್ನು ಎಲ್ಲರೂ ಸೇರಿ ಯಶಸ್ವಿಯಾಗಿ ಆಚರಿಸಲು ಅಗತ್ಯ ಸಹಕಾರ ನೀಡುವುದಾಗಿ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಅಧ್ಯಕ್ಷ ವಿಜಯ ಜಾಗಟಗಲ್ ಮಾತನಾಡಿ ರಿಪೋರ್ಟರ್ಸ್ ಗಿಲ್ಡ್ ಬೆಳ್ಳಿ ಮಹೋತ್ಸವದ ಅಂಗವಾಗಿ ಜಿಲ್ಲೆಯ ಪತ್ರಕರ್ತರಿಗೆ ವಿವಿಧ ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಇಂದು ಜಿಲ್ಲಾ ಮಟ್ಟದ ಕ್ರಿಕೆಟ್ ಪಂದ್ಯಾವಳಿ ಹಮ್ಮಿಕೊಂಡಿದ್ದು ಮುಂದಿನ ದಿನಗಳಲ್ಲಿ ಆರೋಗ್ಯ ಶಿಬಿರ, ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಕೆ.ಶಾಂತಪ್ಪ, ಆರ್ ಎಪಿಎಂಸಿ ಅಧ್ಯಕ್ಷ ಜಯವಂತರಾವ್ ಪತಂಗೆ, ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆರ್.ಗುರುನಾಥ್, ಗಿಲ್ಡ್ ಪ್ರ.ಕಾರ್ಯದರ್ಶಿ ವೆಂಕಟೇಶ ಹೂಗಾರ, ಜಂಟಿ ಕಾರ್ಯದರ್ಶಿ ಶ್ರೀಕಾಂತ್ ಸಾವೂರು, ನಿಕಟ ಪೂರ್ವ ಅಧ್ಯಕ್ಷ ಚನ್ನಬಸವಣ್ಣ, ಸದಸ್ಯರಾದ ಚನ್ನಬಸವ ಬಾಗಲವಾಡ, ಖಾನ್ ಸಾಬ್ ಮೋಮಿನ್ ಸೇರಿದಂತೆ ವಿವಿಧ ತಾಲೂಕಿನ ಕ್ರಿಕೆಟ್ ತಂಡಗಳ ಕ್ರೀಡಾಪಟುಗಳು ಹಿರಿಯ ಕಿರಿಯ ಪತ್ರಕರ್ತರು ಉಪಸ್ಥಿತರಿದ್ದರು.



ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ ತಿಪ್ಪರಾಜು ಅಭ್ಯರ್ಥಿ ಪರ ಮತಯಾಚನೆ

ರಾಯಚೂರು, ಅ.3-

ಈಶಾನ್ಯ ಶಿಕ್ಷಕರ ಕ್ಷೇತ್ರ ವಿಧಾನ ಪರಿಷತ್ ಚುನಾವಣೆಯ ನಿಮಿತ್ಯ ರಾಯ ಚೂರು ಜಿಲ್ಲೆಯ ಬಿಜೆಪಿ ಪಕ್ಷದ ಜಿಲ್ಲಾ ಉಸ್ತುವಾರಿಗಳು ಹಾಗೂ ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ತಿಪ್ಪರಾಜು ಹವಲ್ದಾರ್ ಅವರು ಅಭ್ಯರ್ಥಿ ಪರ ಮತಯಾಚನೆ ನಡೆಸಿದರು.


ರಾಯಚೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಯಾಪಲದಿನ್ನಿ ಗ್ರಾಮದ ಜೆಪಿ ಪ್ರತಿಭಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆ,ಜ್ಞಾನಜೋತಿ ವಿದ್ಯಾನಿಕೇತನ ಪ್ರೌಢ ಶಾಲೆ, ಕರ್ನಾಟಕ ಪಬ್ಲಿಕ್ ಸ್ಕೂಲ್, ವಿರಾಟ್ ಪದವಿ ಮಹಾ ವಿದ್ಯಾಲಯಗಳಿಗೆ ತೆರಳಿ ಶಿಕ್ಷಕರನ್ನು ಭೇಟಿ ಮಾಡಿ ಅಭ್ಯರ್ಥಿ ಶಶಿಲ್ ಜಿ ನಮೋಶಿ ಅವರ ಪರವಾಗಿ ಮತ ಯಾಚನೆ ಮೂಲಕ ಜಿಲ್ಲೆಯ ಚುನಾವಣಾ ಪ್ರಚಾರ ಆರಂಭಿಸಿದರು.

ಅಭ್ಯರ್ಥಿ ಶಶಿಲ್ ಜಿ ನಮೋಶಿ ಅವರ ಮತಯಾಚನೆ ನಡೆಸಿ, ಅವರಿಗೆ ತಮ್ಮ ಅಮೂಲ್ಯವಾದ ಮತ ಹಾಕುವ ಬೆಂಬಲಿಸಬೇಕು ಎಂದು ಕೋರಿದರು.

ಈ ಸಂದರ್ಭ ದಲ್ಲಿ ಶಿಕ್ಷಕರು, ಅನೇಕರು ಉಪಸ್ಥಿತರಿ ದ್ದರು.

ದಸರಾ ಗಿಫ್ಟ್: ವಂದೇ ಭಾರತ್ ಸ್ಲೀಪರ್ ರೈಲು ಕ.ಕರ್ನಾಟಕ ಮಾರ್ಗದಲ್ಲಿ ಲಭ್ಯ: ಡಾ.ಬಾಬುರಾವ್

ರಾಯಚೂರು,ಅ.03– ದೂರದ ಪ್ರಯಾಣ ಮಾಡುವ ಪ್ರಯಾಣಿಕರ ಅನುಕೂಲಕ್ಕಾಗಿ ವಂದೇ ಭಾರತ್ ಸ್ಲೀಪರ್ ರೈಲು ಮತ್ತೊಂದು ಮಾರ್ಗದಲ್ಲಿ ಶೀಘ್ರದಲ್ಲೇ ಲಭ್ಯವಾಗಲಿ ದೆ ಎಂದು ರೈಲ್ವೆ ಸಲಹಾ ಮಂಡಳಿಯ ಸದಸ್ಯ ಡಾ. ಬಾಬುರಾವ್ ತಿಳಿಸಿದ್ದಾರೆ.



ದೇಶದ ಆರ್ಥಿಕ ರಾಜಧಾನಿ ಮುಂಬೈ ಮತ್ತು ತಂತ್ರಜ್ಞಾನ ರಾಜಧಾನಿ ಎಂದು ಗುರುತಿಸಲ್ಪಟ್ಟ ಬೆಂಗಳೂರು ನಡುವೆ ಎರಡನೇ ವಂದೇ ಭಾರತ್ ಸ್ಲೀಪರ್ ರೈಲು ಸೇವೆ ನೀಡಲಿದೆ. ದಸರಾ ಕೊಡುಗೆಯಾಗಿ ಈ ರೈಲು ಸೇವೆ ಲಭ್ಯವಾಗುವ ಸಾಧ್ಯತೆ ಇದೆ ಎಂದು ರೈಲ್ವೆ ಇಲಾಖೆ ಮಾಹಿತಿ ನಿಡಿರುವುದಾಗಿ ಅವರು ಹೇಳಿದ್ದಾರೆ.

ಈಗಾಗಲೇ ಈ ಹೊಸ ರೈಲಿಗೆ ರೈಲ್ವೆ ಮಂಡಳಿ ಅನುಮೋದನೆ ನೀಡಿದ್ದು, ಪ್ರಾರಂಭದ ದಿನಾಂಕದ ಬಗ್ಗೆ ಶೀಘ್ರದಲ್ಲೇ ಸ್ಪಷ್ಟನೆ ಬರಲಿದೆ. ಮುಂಬೈ–ಬೆಂಗಳೂರು ವಂದೇ ಭಾರತ್ ಸ್ಲೀಪರ್ ರೈಲು ವಾರದಲ್ಲಿ ಆರು ದಿನಗಳು ಸಂಚರಿಸಲಿದೆ.

ಬೆಂಗಳೂರಿನಿಂದ ಸೋಮವಾರ ಹೊರತುಪಡಿಸಿ, ಮುಂಬೈನಿಂದ ಮಂಗಳವಾರ ಹೊರತುಪಡಿಸಿ ಈ ರೈಲು (ರೈಲು ಸಂಖ್ಯೆ 27652) ಪ್ರಯಾಣಿಕರಿಗೆ ಸೇವೆ ನೀಡಲಿದೆ.





ರೋಟರಿ ಕ್ಲಬ್ ಸಾಮಾಜಿಕ ಸೇವೆ ಶ್ಲಾಘನೆ-ಸ್ಮಿತಾ ಅಕ್ಕ

ರಾಯಚೂರು, ಅ.3-

ರೋಟರಿ ಕ್ಲಬ್ ಕೃಷ್ಣ ತುಂಗೆ ವತಿಯಿಂದ ಶುಕ್ರವಾರ ನಗರದ ಕೃಷಿ ವಿಶ್ವ ವಿದ್ಯಾಲಯದಲ್ಲಿ ನಡೆದ ನೇಶನ್ ಬಿಲ್ಡರ್ಸ್ ಅವಾರ್ಡ್ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳಲ್ಲಿ ಸಾಧನೆ ಮತ್ತು ಸೇವೆ ಸಲ್ಲಿಸಿದ 19 ಜನರಿಗೆ ನೇಶನ್ ಬಿಲ್ಡರ್ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಕಾಯರ್ಕ್ರಮದ ಮೊದಲಿಗೆ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಇಬ್ಬರ ಮಹನೀಯರು ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ರಾಜಯೋಗಿನಿ ಸ್ಮಿತಾ ಅಕ್ಕ ಅವರು ಮಾತನಾಡಿ,ಸ್ವಾತಂತ್ರ್ಯ ಹೋರಾಟದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಎಲ್ಲರನ್ನೂ ಒಗ್ಗೂಡಿಸುವ ಮೂಲಕ ಸ್ವಾತಂತ್ರ್ಯ ಸಿಕ್ಕಿರುವುದು

ಹೋರಾಟದ ಏಕತೆ ಆಧಾರವಾಗಿದೆ.ಎಲ್ಲಾ ಮಹನೀಯರ ತ್ಯಾಗ ಬಲಿದಾನದಿಂದ ದೇಶಕ್ಕೆ ಸ್ವಾತಂತ್ರ್ಯ ದೊರಕಿದೆ. ರೋಟರಿ ಕ್ಲಬ್ ನಿರಂತರವಾಗಿ ಸಾಮಾಜಿಕ ಸೇವೆ ಮಾಡುತ್ತಿದೆ. ಒಂದು ಸಮಾಜವನ್ನು ಸಕಾರಾತ್ಮಕವಾಗಿ ನಿರ್ಮಾಣ ಮಾಡಬೇಕಾದರೆ ಮೊದಲು ನಾವು ಬದಲಾವಣೆ ಆಗಬೇಕು. ಒಬ್ಬ ವ್ಯಕ್ತಿಯ ಪರಿವತರ್ನೆಯಿಂದ ಮಾತ್ರ ಸಮಾಜದ ಪರಿವರ್ತನೆ ಸಾಧ್ಯ. ರೋಟರಿ ಕ್ಲಬ್ ಒಂದು ಸಾಮಾಜಿಕ ಸೇವೆ ಮಾಡುತ್ತಿರುವವರನ್ನು ಗುರುತಿಸಿ ಅವರಿಗೆ ಮತ್ತಿಷ್ಟು ಸಾಮಾಜಿಕ ಜವಾಬ್ದಾರಿ ನೀಡುವ ಮೂಲಕ ರೋಟರಿ ಕ್ಲಬ್ ಉತ್ತಮ ವೇದಿಕೆಯಾಗಿದೆ. ರೋಟರಿ ಕ್ಲಬ್ ಕೃಷ್ಣ ತುಂಗೆ ಅಧ್ಯಕ್ಷರಾದ ಅಮರೇಶರೆಡ್ಡಿ ಅವರು ಮಾತನಾಡಿ, ಸಾಮಾಜಿಕ ಸೇವೆಯಲ್ಲಿ ನಿರಂತರವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳುವವರನ್ನು ರೋಟರಿ ಕ್ಲಬ್ ಗುರುತಿಸಿ ಅವರನ್ನು ಗೌರವಿಸುವ ಮೂಲಕ ಸಾಮಾಜಿಕ ಸೇವೆಯ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ.

ಬದುಕುವುದರ ಜತೆಗೆ ಸಮಾಜಕ್ಕಾಗಿ ನಮ್ಮನ್ನು ನಾವು ತೊಡಗಿಸಿಕೊಳ್ಳಲು ರೋಟರಿ ಕ್ಲಬ್ ಪರಿಣಾಮಕಾರಿಯಾದ ವೇದಿಕೆ. ಈ ಸಂದರ್ಭದಲ್ಲಿ

ಅಧ್ಯಕ್ಷರಾದ ಕೆ.ಅಮರೇಶ್ ರೆಡ್ಡಿ ಕಾರ್ಯದರ್ಶಿವಿಭಾಂಶು ಜೈನ್,ಅಸಿಸ್ಟೆಂಟ್ ಗವರ್ನರ್ ,ಕೆ ಚಂದ್ರಕಾಂತ್,ಜೋನಲ್ ಟ್ರೈನಿಂಗ್ ಫೆಸಿಲೇಟರ್, ಕೆ. ಲಕ್ಷ್ಮಿಕಾಂತ್ ರೆಡ್ಡಿ ಫಾಸ್ಟ್ ಪ್ರೆಸಿಡೆಂಟ್ ಪವನ್ ಕಿಶೋರ್ ಪಾಟೀಲ್, ಮಲ್ಲಿಕಾರ್ಜುನ್ ಜಿ, ಕೆ ತಿರುಮಲ ರೆಡ್ಡಿ,ಸಂಪತ್ ಕುಮಾರ್ ಶೆಟ್ಟಿ,ಮಂಜುನಾಥ ಹಾನಗಲ್, ಎಸ್ ಬಿ ಮಾಲಿ ಪಾಟೀಲ್, ವೀರೇಂದ್ರ ಕಿಲ್ಕಿಲೆ ,ಹನುಮಂತ ರೆಡ್ಡಿ, ಚೇತನ್ ಕುಮಾರ್ ಎಸ್ ಕಾರ್ಯಕ್ರಮ ರಂಗಲಿಂಗನಗೌಡ ನಡೆಸಿಕೊಟ್ಟರು.

ರಾಜ್ಯಕ್ಕೆ 3705.30 ಕೋಟಿ ರೂ.ಬರ ಪರಿಹಾರ ನೀಡಿ: ಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು, ಅ.3:

ಕರ್ನಾಟಕ ರಾಜ್ಯವು ತೀವ್ರ ಬರ ಪರಿಸ್ಥಿತಿಯನ್ನು ಎದುರಿಸುತ್ತಿದ್ದು, ರೈತರು, ಜನಸಾಮಾನ್ಯ ತೀವ್ರ ಸಂಕಷ್ಟಕ್ಕೊಳಗಾಗಿದ್ದಾರೆ. ಮಾನದಂಡಗಳನ್ವಯ ರಾಜ್ಯಕ್ಕೆ 3705.30 ಕೋಟಿ ರೂ. ಬರ ಪರಿಹಾರ ನೀಡಿ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೇಂದ್ರ ಬರ ಅಧ್ಯಯನ ತಂಡಕ್ಕೆ ಮನವಿ ಮಾಡಿದ್ದಾರೆ.

ಬರ ಅಧ್ಯಯನಕ್ಕೆ ರಾಜ್ಯಕ್ಕೆ ಆಗಮಿಸಿರುವ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಅಜಿತ್ ಕುಮಾರ್ ಸಾಹು ನೇತೃತ್ವದ ಕೇಂದ್ರದ ಅಂತರ್ಸಚಿವಾಲಯ ತಂಡದೊಂದಿಗೆ ಅವರು ಶನಿವಾರ ಗೃಹ ಕಚೇರಿ ಕೃಷ್ಣಾದಲ್ಲಿ ಸಮಾಲೋಚನೆ ನಡೆಸಿದರು.

ರಾಜ್ಯಕ್ಕೆ ನ್ಯಾಯಸಮ್ಮತ ಪರಿಹಾರ ದೊರಕಿಸಿ

ರಾಜ್ಯದಲ್ಲಿ 240 ತಾಲೂಕುಗಳ ಪೈಕಿ 217 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಯಾವುದೇ ಒತ್ತಡಗಳಿಗೆ ಜಗ್ಗದೆ, ಕೇಂದ್ರ ಸರ್ಕಾರದ ವಿಪತ್ತು ನಿರ್ವಹಣೆಯ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಅತ್ಯಂತ ವೈಜ್ಞಾನಿಕವಾಗಿ ಮೌಲ್ಯಮಾಪನ ನಡೆಸಿ ಬರಪೀಡಿತ ತಾಲೂಕುಗಳನ್ನು ಘೋಷಿಸಲಾಗಿದೆ ಎಂದು ತಿಳಿಸಿದರು.

ರೈತರು ಕಂಗಾಲಾದರೆ ಎಲ್ಲವೂ ಸ್ಥಗಿತವಾಗುತ್ತದೆ. ಆದ್ದರಿಂದ ಕೇಂದ್ರ ಸರ್ಕಾರವು ರಾಜ್ಯದ ರೈತರ ನೆರವಿಗೆ ಧಾವಿಸಬೇಕು ಎಂದು ಮನವಿ ಮಾಡಿದರು.

ಆಘಾತಕಾರಿ ಪರಿಸ್ಥಿತಿ

ನನ್ನ ಹಾಗೂ ಉಪಮುಖ್ಯಮಂತ್ರಿ ಡಾ.ಪರಮೇಶ್ವರ ಅವರ ನಾಲ್ಕು ದಶಕಗಳ ಸಾರ್ವಜನಿಕ ಜೀವನದಲ್ಲಿ ಜನರು ಇಷ್ಟು ತೊಂದರೆಗೊಳಗಾಗಿರುವುದನ್ನು ನೋಡಿಲ್ಲ. ಇದು ಅತ್ಯಂತ ಆಘಾತಕಾರಿ ಪರಿಸ್ಥಿತಿ. ಜನಪ್ರತಿನಿಧಿಗಳು ಹಾಗೂ ರೈತರ ಸಮಸ್ಯೆಗಳನ್ನು ಅರಿಯಲು ವಿಶೇಷ ಅಧಿವೇಶನ ಕರೆಯಲಾಗಿತ್ತು. 150 ಶಾಸಕರು ತಮ್ಮ ಕ್ಷೇತ್ರದ ಸಮಸ್ಯೆಗಳ ಕುರಿತು ಮಾತನಾಡಿದರು ಎಂದು ವಿವರಿಸಿದರು.

ರಾಜ್ಯದ ಕೃಷ್ಣಾ ಜಲಾನಯನ ಪ್ರದೇಶ ಹೊರತು ಪಡಿಸಿ ಎಲ್ಲ ಜಲಾಶಯಗಳಲ್ಲಿ ನೀರಿನ ಹರಿವು ಕಡಿಮೆ ಇದೆ. ಮಲೆನಾಡು, ಕರಾವಳಿ ಪ್ರದೇಶಗಳಲ್ಲಿಯೂ ಮಳೆಯ ತೀವ್ರ ಕೊರತೆಯಾಗಿದೆ. ಅದಾಗ್ಯೂ ಕಾವೇರಿ ನದಿಗೆ ನೀರು ಬಿಡುಗಡೆ ಮಾಡುವಂತೆ ಸಿಡಬ್ಲ್ಯುಸಿ ಆದೇಶ ನೀಡುತ್ತಿದೆ. ನಗರ ಪ್ರದೇಶಗಳಲ್ಲಿಯೂ ನೀರಿನ ಸಮಸ್ಯೆ ಎದುರಾಗಿದೆ. ರೈತರಿಗೆ ರಾಜ್ಯ ಸರ್ಕಾರದ ಹಂತದಲ್ಲಿ 2500 ರೂ. ಪರಿಹಾರ ಮೊತ್ತ ಘೋಷಿಸಲಾಗಿದೆ. ಆದರೆ ಕೇಂದ್ರದಿಂದ ಹೆಚ್ಚಿನ ಸಹಕಾರವನ್ನು ನಿರೀಕ್ಷಿಸುತ್ತಿದ್ದೇವೆ ಎಂದರು.

ಮುನ್ನೆಚ್ಚರಿಕೆಯ ಕ್ರಮ



ರಾಜ್ಯ ಸರ್ಕಾರದ ಎಲ್ಲ ಸಚಿವರೂ ಜಿಲ್ಲೆಗಳಿಗೆ ಭೇಟಿ ನೀಡಿ ವಸ್ತುಸ್ಥಿತಿ ಪರಿಶೀಲನೆ ನಡೆಸಿದ್ದಾರೆ. ಅಧಿಕಾರಿಗಳೂ ತಮ್ಮ ಇಲಾಖೆಗಳಿಗೆ ಸಂಬಂಧಿಸಿದಂತೆ ಮುನ್ನೆಚ್ಚರಿಕೆ, ಪರಿಹಾರ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಮಾನ್ಯ ಪ್ರಧಾನಮಂತ್ರಿಯವರು ಬರ ಪರಿಸ್ಥಿತಿಯ ಕುರಿತು ರಾಜ್ಯಕ್ಕೆ ಭೇಟಿ ನೀಡಿದಾಗ ಮುನ್ನೆಚ್ಚರಿಕೆ ನೀಡಿದ್ದರು. ಅದರಂತೆ ನಾನೂ ಸಚಿವ ಸಂಪುಟ ಸಹೋದ್ಯೋಗಿಗಳು ಹಾಗೂ ಅಧಿಕಾರಿಗಳಿಗೆ ಸೂಚನೆ ನೀಡಿದ್ದೆನು. ರೈತರಿಗೂ ಬಿತ್ತನೆ ಕುರಿತು ಮಾರ್ಗದರ್ಶನ ನೀಡಲಾಗಿತ್ತು ಎಂದು ವಿವರಿಸಿದರು.

ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಕಬ್ಬು ಬೆಳೆಗಾರರು ಹೆಚ್ಚಿನ ಬೆಲೆಗೆ ಒತ್ತಾಯಿಸುತ್ತಿದ್ದಾರೆ. ಅಂತೆಯೇ ಹಾಲು ಉತ್ಪಾದಕರೂ ಕನಿಷ್ಠ 10 ರೂ. ದರ ಏರಿಕೆಗೆ ಒತ್ತಾಯಿಸುತ್ತಿದ್ದಾರೆ. ಈ ಸವಾಲಿನ ಪರಿಸ್ಥಿತಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜೊತೆಯಾಗಿ ಕೆಲಸ ಮಾಡೋಣ ಎಂದು ಕರೆ ನೀಡಿದರು.

ಈ ಸಭೆಯಲ್ಲಿ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ, ಸರಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಎಲ್.ಕೆ.ಅತೀಕ್, ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತ ಡಾ.ಉಮಾ ಮಹಾದೇವನ್, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಆರ್ಥಿಕ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಪ್ರಧಾನ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ ಮತ್ತು ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ವಸ್ತುನಿಷ್ಠ ವರದಿ ಸಲ್ಲಿಕೆ: ಕೇಂದ್ರ ತಂಡ ಮುಖ್ಯಸ್ಥರ ಭರವಸೆ

ಮುಖ್ಯಮಂತ್ರಿಯ ಮನವಿಗೆ ಪ್ರತಿಕ್ರಿಯೆ ನೀಡಿದ ಕೇಂದ್ರ ಬರ ಪರಿಸ್ಥಿತಿ ಅಧ್ಯಯನ ತಂಡದ ಮುಖ್ಯಸ್ಥ ಅಜಿತ್ ಕುಮಾರ್ ಸಾಹು ಮಾತನಾಡಿ, ತಾವು ಮೂರು ದಿನಗಳ ಕಾಲ ರಾಜ್ಯದಲ್ಲಿ ಪ್ರವಾಸ ಮಾಡಿ ವಸ್ತುಸ್ಥಿತಿ ಅರಿಯುವುದರೊಂದಿಗೆ ದತ್ತಾಂಶಗಳನ್ನೂ ರಾಜ್ಯ ಸರಕಾರದ ಅಧಿಕಾರಿಗಳಿಂದ ಪಡೆದುಕೊಂಡು ವಸ್ತುನಿಷ್ಠ ವರದಿ ಸಲ್ಲಿಸುವುದಾಗಿ ತಿಳಿಸಿದರು.

ಜಿಲ್ಲಾಡಳಿತದಿಂದ ಗಾಂಧಿ ಹಾಗೂ ಶಾಸ್ತ್ರೀ ಜಯಂತಿ ಆಚರಣೆ

ಗಾಂಧೀ, ಶಾಸ್ತ್ರೀ ಭಾವಚಿತ್ರಕ್ಕೆ ಪೂಜೆ ಸಲ್ಲಿಕೆ, ಗೌರವ ನಮನ



ಬಾಗಲಕೋಟೆ,ಅ.02-

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ರಾಷ್ಟ್ರಪಿತ ಮಹಾತ್ಮಾಗಾಂಧೀಜಿ ಹಾಗೂ ಮಾಜಿ ಪ್ರಧಾನಮಂತ್ರಿ ಲಾಲ್ ಬಹದ್ದೂರ ಶಾಸ್ತ್ರೀ ಅವರ ಜಯಂತಿಯನ್ನು ಜಿಲ್ಲಾಡಳಿತ ಭವನದ ಮುಖ್ಯದ್ವಾರದಲ್ಲಿ ಶುಕ್ರವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಬಾಗಲಕೋಟೆ ಶಾಸಕ ಉರ್ಮೇಶ ಮೇಟಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಅನೀಲಕುಮಾರ ದಡ್ಡಿ, ಬುಡಾದ ಅಧ್ಯಕ್ಷ ಅಬ್ದುಲರಜಾಕ ಬೇನೂರ, ಜಿಲ್ಲಾಧಿಕಾರಿ ಸಂಗಪ್ಪ, ಜಿಲ್ಲಾ ಪೊಲೀಸ್? ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿ.ಪಂ ಉಪ ಕಾರ್ಯದರ್ಶಿ ಎನ್.ವೈ.ಬಸರಿಗಿಡದ ಸೇರಿದಂತೆ ಇತರ ಗಣ್ಯಮಾನ್ಯರು ಗಾಂಧಿ ಹಾಗೂ ಶಾಸ್ತ್ರೀಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಪುಷ್ಪಾರ್ಚನೆಗೈದು ನಮನ ಸಲ್ಲಿಸಿದರು.

ಗಾಂಧೀಜಿಯವರ ಸರ್ವ ಧರ್ಮ ಸಮಭಾವ ಹಾಗೂ ಮಾನವೀಯ ಮೌಲ್ಯಗಳ ಸಂದೇಶವನ್ನು ಸಾರುವ ನಿಟ್ಟನಲ್ಲಿ ವಿವಿಧ ಧರ್ಮದ ಗುರುಗಳಾದ ಸ್ನೇಹಾ ಜುರಾಪೂರ ಭಗವದ್ಗೀತಾ, ಆಸೀಫ್ ಎಲ್. ಮುದಗಲ್ಲ ಕುರಾನ ಹಾಗೂ ಆನಿಸ್? ಬೈಬಲ್ ಕುರಿತು ಪಠಣ ಮಾಡಿದರು.

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮಾ ಗಾಂಧೀಜಿ ಅವರ ಅಹಿಂಸೆ, ಸತ್ಯಾಗ್ರಹ ಹಾಗೂ ಸರಳ ಜೀವನದ ಆದರ್ಶಗಳನ್ನು ಸ್ಮರಿಸಲಾಯಿತು. ದೇಶದ ಅಭಿವೃದ್ದಿ, ಶಿಸ್ತು ಹಾಗೂ ಪ್ರಾಮಾಣಿಕ ಆಡಳಿತಕ್ಕೆ ಲಾಲ್ ಬಹದ್ದೂರ ಶಾಸ್ತ್ರೀ ಅವರು ನೀಡಿದ ಕೊಡುಗೆಯನ್ನು ಸಹ ಸ್ಮರಿಸಲಾಯಿತು.ಈ ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಗಾಂದೀಜಿ ಕುರಿತು ಹೊರತಂದ ವಾರ್ತಾ ಜನಪರ ವಿಶೇಶ ಸಂಚಿಕೆಯನ್ನು ಶಾಸಕ ಉಮೇಶ ಮೇಟಿ ಸೇರಿದಂತೆ ಇತರೆ ಗಣ್ಯಮಾನ್ಯರು ಬಿಡುಗಡೆಗೊಳಿಸಿ ದರು. ಕಾರ್ಯಕ್ರಮದಲ್ಲಿ ಸಾಮೂ ಹಿಕವಾಗಿ ರಘುಪತಿ ರಾಘವ ರಾಜಾರಾಮ ಗೀತೆ ಹಾಡಲಾ ಯಿತು.

ಕಾರ್ಯಕ್ರಮದಲ್ಲಿ ಜಿ.ಪಂ ಮುಖ್ಯ ಯೋಜನಾಧಿಕಾರಿ ಅಲ್ಲಮ ಪ್ರಭು ಅಲ್ಲಾಪೂರ, ಮುಖ್ಯ ಲೆಕ್ಕಾಧಿಕಾರಿ ಸಿದ್ರಾಮೇಶ್ವರ ಉಕ್ಕಲಿ, ಆಹಾರ ಇಲಾಖೆಯ ಜಂಟಿ ನಿರ್ದೇ ಶಕ ಶ್ರೀಶೈಲ ಕಂಕಣವಾಡಿ, ಜಂಟಿ ಕೃಷಿ ನಿರ್ದೇಶಕ ಟಿ.ಎಸ್?. ರುದ್ರೇಶಪ್ಪ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ರವೀಂದ್ರ ಹಕಾಟಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸದಾಶಿವ ಬಡಿಗೇರ, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಉಪ ನಿರ್ದೇಶಕ ಕೆ.ಪ್ರಭಾಕರ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸೀತಾರಾಮು, ಆಯುಷ ಇಲಾಖೆಯ ಜಿಲ್ಲಾ ಅಧಿಕಾರಿ ಡಾ.ಶೇಖರಯ್ಯ ಮಠ, ಜಿಲ್ಲಾ ವಾರ್ತಾಧಿಕಾರಿ ಕಸ್ತೂರಿ ಪಾಟೀಲ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಹಾನಗಲ್ಲ ಶ್ರೀಗಳ 159ನೇ ಜಯಂತೋತ್ಸವ ಅಂಗವಾಗಿ ಪಟ್ಟಣದಲ್ಲಿ ಬುತ್ತಿ ಜಾತ್ರಾ ಮಹೋತ್ಸವ ಜಿಲ್ಲಾಧಿಕಾರಿಗಳಿಂದ ಚಾಲನೆ

ಸಿಂಧನೂರು,ಅ.02– ಹಾನಗಲ್ಲ ಕುಮಾರೇಶ್ವರ ಶಿವಯೋಗಿಗಳ 159ನೇ ಜಯಂತಿ ಅಂಗವಾಗಿ. ಸಿಂಧನೂರಿನಲ್ಲಿ ವೀರಶೈವ ಲಿಂಗಾಯತ ಸಮಾಜದ ನೇತೃತ್ವದಲ್ಲಿ. 11 ದಿನಗಳ ಕಾಲ ಪ್ರವಚನ ಕಾರ್ಯಕ್ರಮ ಹಮ್ಮಿಕೊಂಡಿದ್ದು. 9ನೇ ದಿನವಾದ ಶುಕ್ರವಾರ ಸಂಜೆ ಸಾರ್ವಜನಿಕರಿಗೆ ಮತ್ತು ಯುವಜನತೆಗೆ ದಾಸೋಹ ಪ್ರಜ್ಞೆ ಮೂಡಿಸುವ ನಿಟ್ಟಿನಲ್ಲಿ ಜನಸಾಗರದ ಮಧ್ಯೆ ಭಕ್ತಿಯ ಬುತ್ತಿ ಜಾತ್ರೆ ವಿಜ್ರಂಭಣೆಯಿಂದ ನಡೆಯಿತು.



ಈ ಕಾರ್ಯಕ್ರಮಕ್ಕೆ ರಾಯಚೂರು ಜಿಲ್ಲಾಧಿಕಾರಿಯಾದ ಪೋವಿತಾ ಎಸ್. ಅವರು ಬುತ್ತಿ ಹೊತ್ತ ಮಹಿಳೆಯರ ಮೆರವಣಿಗೆಗೆ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು. ನಂತರ ನಗರದ ಎಪಿಎಂಸಿ ಗಣೇಶ್ ದೇವಸ್ಥಾನದಿಂದ ಆರಂಭಗೊಂಡ ಮೆರವಣಿಗೆಯಲ್ಲಿ ನಗರ ಸೇರಿದಂತೆ ವಿವಿಧ ಗ್ರಾಮಗಳಿಂದ ಸಹಸ್ರಾರು ಮಹಿಳೆಯರು ಬುತ್ತಿಯನ್ನು. ಕೇಸರಿ ಬಿಳಿ ಮತ್ತು ಹಸಿರು ಬಣ್ಣದ ಬಟ್ಟೆಯಲ್ಲಿ. ರೊಟ್ಟಿ. ಕರ್ಚಿಕಾಯಿ. ಎಳ್ಳು ಹೋಳಿಗೆ. ಶೇಂಗಾ ಹೋಳಿಗೆ. ಮತ್ತಿತರ ಸಿಹಿ ತಿನಿಸುಗಳನ್ನು ಕಟ್ಟಿಕೊಂಡು ತಲೆಯ ಮೇಲೆ ಹೊತ್ತುಕೊಂಡು ಸಾಲಾಗಿ ರಸ್ತೆಯ ಮೇಲೆ ಹೊರಟಿದ್ದ ದೃಶ್ಯ ನೋಡುಗರ ಗಮನ ಸೆಳೆಯಿತು.

ಈ ಮೆರವಣಿಗೆ ನಗರದ ಬಾಬು ಜಗಜೀವನ್ ರಾಮ್ ವೃತ್ತ. ಬಸವೇಶ್ವರ ವೃತ್ತ. ನಟರಾಜ್ ಕಾಲೋನಿ ರಸ್ತೆ. ಟಿಪ್ಪು ಸುಲ್ತಾನ್ ವೃತ್ತ. ಬಡಿ ಬೇಸ್ ಮಸ್ಜಿದ್. ಹಳೆ ಬಜಾರ್ ರಸ್ತೆ. ಕಿತ್ತೂರ ರಾಣಿ ಚೆನ್ನಮ್ಮ ವೃತ್ತ. ಕನಕದಾಸ ವೃತ್ತ. ನಗರ ಪೊಲೀಸ್ ಠಾಣೆ ವೃತ್ತದ ಮೂಲಕ. ಆರ್. ಜಿ. ಎಂ. ಶಾಲಾ ಮೈದಾನಕ್ಕೆ ಮೆರವಣಿಗೆ ತಲುಪಿತು. ನಂತರ ಬುತ್ತಿ ಜಾತ್ರೆಯ ಬಹಿರಂಗ ಕಾರ್ಯಕ್ರಮ ಮತ್ತು ಪ್ರವಚನ ಕಾರ್ಯಕ್ರಮ ನಡೆಯಿತು. ಸುಮಾರು 10 ಸಾವಿರಕ್ಕೂ ಹೆಚ್ಚು ಜನರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ರಸ್ತೆಯ ಎರಡು ಬದಿಗಳಲ್ಲಿ ನಿಂತ ಜನ ಆಕರ್ಷಕ ಬುತ್ತಿ ಮೆರವಣಿಗೆಯ ದೃಶ್ಯವನ್ನು ಕಣ್ತುಂಬಿ ಕೊಂಡರು. ಡೊಳ್ಳು ಕುಣಿತ. ನಂದಿಕೋಲು ಕುಣಿತ. ಹಲಗೆ ಕುಣಿತ. ಮತ್ತು ಗೊಂಬೆ ಕುಣಿತ. ಮತ್ತಿತರ ವಾದ್ಯಗಳು ಮೆರವಣಿಗೆಯ ಮೆರುಗು ತುಂಬಿದವು.

ಶೇ ಗುಣಶಿಯ ಮಹಾಂತ ಪ್ರಭು ಮಹಾಸ್ವಾಮಿ. ಜಯಂತಿ ಆಚರಣೆ ಸಮಿತಿ ಅಧ್ಯಕ್ಷ. ಪಂಚಮ ಸಿದ್ದಲಿಂಗ ಮಹಾಸ್ವಾಮಿ. ಯುದ್ದಲ ದೊಡ್ಡಿಯ ಮಹಾಲಿಂಗ ಮಹಾಸ್ವಾಮಿ. ಒಳಬಳ್ಳಾರಿ ಬಸವಲಿಂಗ ಮಹಾಸ್ವಾಮಿ. ಅಡವಿ ಅಮರೇಶ್ವರ ತೋಂಟದಾರ್ಯ ಮಹಾಸ್ವಾಮಿ. ಶಿವಬಸವ ಮಹಾಸ್ವಾಮಿ. ಶಂಭುಲಿಂಗ ಮಹಾಸ್ವಾಮಿ. ಶಾಸಕ ಹಂಪನಗೌಡ ಬಾದರ್ಲಿ. ಮಾಜಿ ಸಚಿವ ವೆಂಕಟರಾವ್ ನಾಡಗೌಡ. ವಿಧಾನ ಪರಿಷತ್ ಶಾಸಕ. ಬಸನಗೌಡ ಬಾದರ್ಲಿ. ವೀರಶೈವ ಲಿಂಗಾಯತ ಮಹಾಸಭಾದ ತಾಲೂಕ ಅಧ್ಯಕ್ಷರಾದ. ರಾಜಶೇಖರ ಪಾಟೀಲ್. ಮಾಜಿ ಅಧ್ಯಕ್ಷ ಟಿ ಪಂಪನಗೌಡ. ಜೆ.ಡಿ.ಎಸ್. ತಾಲೂಕಾಧ್ಯಕ್ಷ. ಬಸವರಾಜ್ ನಾಡಗೌಡ. ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ. ಪಂಪನಗೌಡ ಬಾದರ್ಲಿ. ನಗರ ಸಭೆ ಮಾಜಿ ಅಧ್ಯಕ್ಷ. ಮಲ್ಲಿಕಾರ್ಜುನ್ ಪಾಟೀಲ್. ಸಿಂಧನೂರು ವಕೀಲರ ಸಂಘದ ಅಧ್ಯಕ್ಷ. ಕೆ. ಭೀಮನಗೌಡ. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ. ಶಿವನಗೌಡ ಎಲೆಕೂಡ್ಲಗಿ. ಬಸವರಾಜ್ ಹಿರೇಗೌಡ. ಮುಖಂಡರಾದ ರಾಜುಗೌಡ ಬಾದರ್ಲಿ. ಎಸ್ ಶರಣೇಗೌಡ. ಯುವ ಜೆಡಿಎಸ್ ಮುಖಂಡರಾದ. ಅಭಿಷೇಕ್ ನಾಡಗೌಡ. ಎನ್ ಅಮರೇಶ್. ಖಾಜಿ ಮಲಿಕ್ ವಕೀಲರು. ಸೈಯದ್ ಆಸಿಫ್. ಆರ್ ಸಿ ಪಾಟೀಲ್. ವಿಶ್ವನಾಥ್ ಮಾಲಿ ಪಾಟೀಲ್. ವೀರೇಶ್ ಹಟ್ಟಿ. ರವಿ ಗೌಡ ಪನ್ನೂರ್. ಬಸವರಾಜ್ ಸಾಹುಕಾರ ಕುರುಕುಂದ. ತಿಮ್ಮಣ್ಣ ಸಾಹುಕಾರ್. ಶಿವಕುಮಾರ್ ಗುಂಜಳ್ಳಿ. ನಾಗರಾಜ ಗಸ್ತಿ. ಶ್ರೀದೇವಿ ಶ್ರೀನಿವಾಸ್. ಪಾರ್ವತಿ ಅಕ್ಕ. ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು .

ಗುರುಕುಲ ಜ್ಞಾನ ಸಂಸ್ಕಾರ ಕೊಡುವ ಕೇಂದ್ರವಾಗಿ ಬೆಳೆಯಲಿ - ರಂಭಾಪುರಿಶ್ರೀ



ರೋಣ,ಅ.02-

ಸಕಲರಿಗೂ ಒಳಿತನ್ನು ಬಯಸಿದ ಧರ್ಮ ವೀರಶೈವ. ವೀರಶೈವ ಧರ್ಮದ ಶ್ರೇಷ್ಠ ಗುರು ಪರಂಪರೆ ಆಯಾ ಕಾಲ ಘಟ್ಟಗಳಲ್ಲಿ ಬೆಳೆದು ಕೊಂಡು ಬಂದಿವೆ. ಇಂದು ಪ್ರಾರಂಭಗೊಂಡ ಶ್ರೀ ಜಗದ್ಗುರು ಪಂಚಾಚಾರ್ಯ ಗುರುಕುಲ ಜ್ಞಾನ ಮತ್ತು ಸಂಸ್ಕಾರ ಕೊಡುವ ಕೇಂದ್ರವಾಗಿ ಬೆಳೆಯಲೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ನಗರದ ಹಿರೇಮಠದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಗುರುಕುಲ ಪ್ರಾರಂಭೋತ್ಸ ವ ಹಾಗೂ ಲಿಂ. ಶ್ರೀ ವಿರೂಪಾಕ್ಷಯ್ಯ ಅಜ್ಜನವರ 20ನೇ ವರ್ಷದ ಪುಣ್ಯ ಸ್ಮರ ಣೋತ್ಸವ ಅಂಗವಾಗಿ ಜರುಗಿದ ಜನ ಜಾಗೃತಿ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಗುರು ಎಂದರೆ ಕೇವಲ ಜ್ಞಾನ ಬೋಧಿಸುವವನು ಅಲ್ಲ. ಜ್ಞಾನ ಸಂಸ್ಕಾರ ಸೇವೆ ಸತ್ಯ ನಿಷ್ಠೆಯ ಮೂಲಕ ಸಮಾಜಕ್ಕೆ ದಾರಿ ತೋರಿಸುವ ದೀಪ. ಈ ಗುರುಕುಲ ವೀರಶೈವ ಧರ್ಮದ ಭವಿಷ್ಯಕ್ಕೆ ಭದ್ರವಾದ ಅಡಿಪಾಯವನ್ನು ಹಾಕಲಿ. ವಿದ್ಯೆ ಯೊಂದಿಗೆ ವಿನಯ ವಚನದೊಂದಿಗೆ ಆಚರಣೆ ಜ್ಞಾನದೊಂದಿಗೆ ಸೇವೆ ಧರ್ಮದೊಂದಿಗೆ ಮಾನವೀಯತೆ ಬೆಳೆದು ಸಮಾಜಕ್ಕೆ ಬೆಳಕು ತೋರಲಿ. ಧರ್ಮ ನಿಷ್ಠೆಯ ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡು ಶಾಸ್ತ್ರ ಜ್ಞಾನವನ್ನು ಜೀವನ ಮೌಲ್ಯಗಳನ್ನು ಸಮನ್ವಯಗೊಳಿಸುವ ಕಾರ್ಯವನ್ನು ಗುರುಕುಲ ಮಾಡುವ ಸಂಕಲ್ಪ ಕೈಗೊಳ್ಳಲಿ. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ತತ್ವ ಸಿದ್ಧಾಂತಗಳನ್ನು ಸಾಧಕರಿಗೆ ಬೋಧಿಸಿ ಜ್ಞಾನವಂತರನ್ನಾಗಿ ಮಾಡುವ ಸಂಕಲ್ಪ ಕೈಕೊಂಡು ಕಾರ್ಯ ಮಾಡಲಿ. ಈ ದಿಶೆಯಲ್ಲಿ ಹಿರೇಮಠದ ಜಗದೀಶ್ವರಸ್ವಾಮಿ ಅವರ ಕಾರ್ಯ ಶ್ಲಾಘನೀಯ ಎಂದು ಹರುಷ ವ್ಯಕ್ತಪಡಿಸಿ ಶಾಲು ಹೊದಿಸಿ ಶುಭ ಹಾರೈಸಿದರು.

ಸಮಾರಂಭ ಉದ್ಘಾಟಿಸಿದ ಕರ್ನಾಟಕ ವಿಧಾನಸಭಾಧ್ಯಕ್ಷರಾದ ಜಿ.ಎಸ್.ಪಾಟೀಲ ಮಾತನಾಡಿ ಪ್ರಾಚೀನ ಗುರು ಪರಂಪರೆಯ ಮೌಲ್ಯಗಳನ್ನು ಆಧುನಿಕ ಕಾಲದ ಅಗತ್ಯ ಗಳೊಂದಿಗೆ ಸಮನ್ವಯ ಗೊಳಿಸುವ ಕಾರ್ಯವನ್ನು ಈ ಗುರುಕುಲ ಮಾಡಲಿ. ಇಲ್ಲಿಂದ ಹೊರಹೊಮ್ಮುವ ವಟುಗಳು ಸಮಾಜಕ್ಕೆ ಜ್ಞಾನದ ಬೆಳಕು ತೋರಲಿ. ಧರ್ಮ ಜ್ಯೋತಿ ನಿರಂತರವಾಗಿ ಬೆಳೆಯಲೆಂದು ಆಶಿಸಿದರು. ನರೇಗಲ್ಲ ಮಲ್ಲಿಕಾರ್ಜುನ ಶಿವಾಚಾರ್ಯರು ಅಬ್ಬಿಗೇರಿ ವೀರಭದ್ರ ಶಿವಾಚಾರ್ಯರು ಉಪದೇಶಾಮೃತವನ್ನಿತ್ತರು. ಸಮಾರಂಭದ ಅಧ್ಯಕ್ಷತೆ ವಹಿಸಿದ ಹಿರೇಮಠದ ಜಗದೀಶ್ವರಸ್ವಾಮಿ ಅವರು ಮಾತನಾಡಿ ಆರೋಗ್ಯಪೂರ್ಣ ಸಮಾಜ ನಿರ್ಮಾ ಣಕ್ಕೆ ಸಂಸ್ಕಾರ ಬೇಕು. ಸಂಸ್ಕಾರವಂತರಾಗಲು ಗುರುಕುಲ ಶಿಕ್ಷಣ ಅಗತ್ಯ. ಎಲ್ಲರ ಸಹಕಾರದಿಂದ ಅತ್ಯುತ್ತಮವಾದ ಗುರುಕುಲ ಮಾಡಬೇಕೆಂಬ ಸತ್ಯ ಸಂಕಲ್ಪ ನಮ್ಮದಾಗಿದೆ. ಸಕಲ ಸದ್ಭಕ್ತರ ಸಹಕಾರ ಸೇವಾ ಮನೋಭಾವ ಇರಲೆಂದು ಬಯಸಿದರು. ಇದೇ ಸಂದರ್ಭದಲ್ಲಿ ಮಹಾತ್ಮಾ ಗಾಂಧೀಜಿ ಅವರ 157ನೇ ಮತ್ತು ದಿವಂಗತ ಪ್ರಧಾನಿ ಲಾಲ್ ಬಹದ್ದೂರ ಶಾಸ್ತ್ರಿಯವರ 122ನೇ ಜನ್ಮ ಜಯಂತಿ ಮಹೋತ್ಸ ವದ ಅಂಗವಾಗಿ ಅವರ ಭಾವಚಿತ್ರಕ್ಕೆ ಶ್ರೀ ರಂಭಾಪುರಿ ಜಗದ್ಗುರುಗಳು ಪುಷ್ಪಾರ್ಚನೆ ನೆರವೇರಿಸಿದರು.

ಪಡಿತರ ಇ-ಕೆವೈಸಿ ಕಡ್ಡಾಯ : ಅ.20 ಅಂತಿಮ ದಿನಾಂಕ

ಹೊಸಪೇಟೆ,ಅ.02-

ವಿಜಯನಗರ ಜಿಲ್ಲೆಯಲ್ಲಿ ಪಡಿತರ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ, 5 ವರ್ಷ ಪೂರೈಸಿದ ಮತ್ತು ಇದುವರೆಗೆ ಇ-ಕೆವೈಸಿ ಮಾಡಿಸದೇ ಬಾಕಿ ಉಳಿದಿರುವ 3,09,645 ಪಡಿತರ ಚೀಟಿ ಫಲಾನುಭವಿಗಳು ಅಕ್ಟೋಬರ್ 20 ರೊಳಗೆ ಕಡ್ಡಾಯವಾಗಿ ಇ-ಕೆವೈಸಿ (-ಏಜಅ) ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿಗಳ ಕಾರ್ಯಾಲಯ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ) ಪ್ರಕಟಣೆಯಲ್ಲಿ ತಿಳಿಸಿದೆ. ಫಲಾನುಭವಿಗಳು ಯಾವುದೇ ಶುಲ್ಕ ನೀಡಬೇಕಿಲ್ಲ. ಸಂಪೂರ್ಣವಾಗಿ ಉಚಿತವಾಗಿ ತಮ್ಮ ಹತ್ತಿರದ ಯಾವುದೇ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ತಮ್ಮ ಇ-ಕೆವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿ ಸಿಕೊಳ್ಳಬಹುದು.

ತಾಲೂಕುವಾರು ಬಾಕಿ ಇರುವ ಇ-ಕೆವೈಸಿ ವಿವರ: ಜಿಲ್ಲೆಯಲ್ಲಿ ಒಟ್ಟು 3,09,645 ಸದಸ್ಯರ ಇ-ಕೆವೈಸಿ ಮಾಡಿಸುವುದು ಬಾಕಿ ಇದ್ದು, ಅದರಲ್ಲಿ ಹರಪನಹಳ್ಳಿ ತಾಲ್ಲೂಕಿನಲ್ಲಿ 74,783, ಹೊಸಪೇಟೆ 70,978, ಹಡಗಲಿ 56,598, ಕೂಡ್ಲಿಗಿ 47,914, ಹಗರಿಬೊಮ್ಮನಹಳ್ಳಿ 41,887, ಕೊಟ್ಟೂರು 17,485 ಫಲಾನುಭವಿಗಳು ಕೆ-ವೈಸಿ ಬಾಕಿ ಉಳಿದಿವೆ. ಆದ್ದರಿಂದ ನ್ಯಾಯಬೆಲೆ ಅಂಗಡಿಗಳಲ್ಲಿ ಬಾಕಿ ಇರುವ ಫಲಾನುಭವಿಗಳ ಪಟ್ಟಿಯನ್ನು ಪ್ರಕಟಿಸಲು ಈ ಕುರಿತು ವ್ಯಾಪಕ ಜಾಗೃತಿ ಮೂಡಿಸಿ ಗರಿಷ್ಠ ಪ್ರಮಾಣದಲ್ಲಿ ಇ-ಕೆವೈಸಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಪ್ರಕಟಣೆಯಲ್ಲಿ ಸೂಚಿಸಿದೆ.

ಶ್ರೀಮತಿ ಫಹಿಮಿದಾ ಬೇಗಂ ಮುಖ್ಯ ಗುರುಗಳ ಬೀಳ್ಕೊಡುಗೆ ಹಾಗೂ ಸನ್ಮಾನ ಕಾರ್ಯಕ್ರಮ ಕಾರ್ಯಕ್ರಮ

ಮಸ್ಕಿ : 01–10–2026.ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಲಿಂಗಸಗೂರು. ಸಮೂಹ ಸಂಪನ್ಮೂಲಗಳ ಕೇಂದ್ರ ಮಸ್ಕಿ. ಹಾಗೂ ಲಿಂಗಸಗೂರು. ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಮಸ್ಕಿ ವತಿಯಿಂದ. ಸುಮಾರು 30 ರಿಂದ 35 ವರ್ಷ ಗಳಿಂದ ಸುದೀರ್ಘವಾಗಿ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ. ಮಸ್ಕಿಯ ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ. ಶ್ರೀಮತಿ ಫಹಿಮಿದಾ ಬೇಗಮ್ ಅವರು ವಯೋ ನಿವೃತ್ತಿ ಹೊಂದಿರುವ ಹಿನ್ನೆಲೆಯಲ್ಲಿ ಬೀಳ್ಕೊಡುಗೆ ಹಾಗೂ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಸನ್ಮಾನ ಕಾರ್ಯಕ್ರಮದಲ್ಲಿ. ಜಿಲ್ಲಾ ಟಿಪ್ಪು ಸುಲ್ತಾನ್ ಸಂಘದ ವತಿಯಿಂದ. ವಯೋ ನಿವೃತ್ತಿ ಹೊಂದಿರುವ. ಶ್ರೀಮತಿ ಫಹಿ ಮಿದಾ ಬೇಗಮ್ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಮತ್ತು ಅವರ ನಿವೃತ್ತಿ ಜೀವನ ಸುಖಕರ ಆರೋಗ್ಯಕರ ವಾಗಿರಲಿ



ಮತ್ತು ದೇವರು ಅವರಿಗೆ ಆರೋಗ್ಯ ಆಯುಸ್ಸು ಐಶ್ವರ್ಯ ಯಶಸ್ಸು ನೀಡಲಿ ಎಂದು ಪ್ರಾರ್ಥಿಸಲಾಯಿತು . ಈ ಸಂದರ್ಭದಲ್ಲಿ ಜಿಲ್ಲಾ ಟಿಪ್ಪು ಸುಲ್ತಾನ್ ಸಂಘದ ಪ್ರಧಾನ ಕಾರ್ಯದರ್ಶಿ. ಜಹೂರ್ ಅಹಮದ್. (ಅಸ್ಲಂ) ಸಿಂಧನೂರು. ತೊಹಿದ್ ಮುದ್ಗಲ್. ಸಾಬೀರ್ ಉಲ್ ಹಕ್ ರಾಯಚೂರ್. ಅಲ್ಲಾವುದ್ದೀನ್ ದೇವದುರ್ಗ. ಶಫೀಕ್ ಅಹಮದ್ ಖಾಜಿ ದೇವದುರ್ಗ.ಫೈರ್ಖುನ್ ನೆಹಾಲ್ ರಾಯಚೂರು. ಸಿರಾಜ್ ಖಾಜಿ ದೇವದುರ್ಗ. ಉಪಸ್ಥಿತರಿದ್ದರು...

ಜನಸೇವೆ ಎಂಬುದು ಕೇವಲ ಕರ್ತವ್ಯವಲ್ಲ ಅದು ಒಂದು ಜವಾಬ್ದಾರಿ. ಬಸನಗೌಡ ಬಾದರ್ಲಿ

ಸಿಂಧನೂರು :02-10-2026 ವಿಧಾನಪರಿಷತ್ ಶಾಸಕರಾದ ಬಸನಗೌಡ ಬಾದರ್ಲಿ ಅವರ ಗೃಹ ಕಚೇರಿ ಜನಸ್ಪಂದನದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜಯಂತಿಯ ಕಾರ್ಯಕ್ರಮದಲ್ಲಿ. ವಿಧಾನ ಪರಿಷತ್ ಶಾಸಕರಾದ ಬಸನಗೌಡ ಬಾದರ್ಲಿ ಅವರು ಭಾಗವಹಿಸಿ. ಗಾಂಧೀಜಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಗೌರವ ಸಮರ್ಪಿಸಿ. ಮಾತನಾಡಿದ ಅವರು ಜನ ಸೇವೆ ಎಂಬುದು ಕೇವಲ ಕರ್ತವ್ಯವಲ್ಲ ಅದು ಒಂದು ಜವಾಬ್ದಾರಿ. ಎಂಬ ಗಾಂಧೀಜಿಯವರ ಸೇವಾ ಮನೋಭಾವವನ್ನು ಸ್ಪೂರ್ತಿಯಾಗಿಸಿಕೊಂಡು. ಸ್ವಚ್ಛ. ಸದೃಢ ಭ್ರಷ್ಟಾಚಾರ ರಹಿತ ಹಾಗೂ ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ಪ್ರಮಾಣಿಕವಾಗಿ ಶ್ರಮಿಸುವ ಸಂಕಲ್ಪವನ್ನು ಈ ಸಂದರ್ಭದಲ್ಲಿ ಪುನರುಚ್ಚರಿಸಿ.



ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜಯಂತಿಯ ಶತಶತ ನಮನಗಳು ಎಂದು ಹೇಳಿದರು. ಈ ಸಂದರ್ಭದಲ್ಲಿ ವಿವಿದ ಸಮಾಜದ ಗುರುಗಳು ಕಾರ್ಯಕರ್ತರು ಉಪಸ್ಥಿತರಿದ್ದರು.

ಜಿಲ್ಲಾ ಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆ: ವಿಜೇತ 9 ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ



ಕಲಬುರಗಿ,ಅ.2-

ಮಹಾತ್ಮ ಗಾಂಧೀಜಿ ಅವರ 157ನೇ ಜನ್ಮ ವರ್ಷಾಚರಣೆ ಅಂಗವಾಗಿ ವಾರ್ತಾ ಮತ್ತು ಸಾರ್ವ ಜನಿಕ ಸಂಪರ್ಕ ಇಲಾಖೆಯು ಗಾಂಧೀಜಿ ಕಲಿಸಿದ ಸರಳ ಜೀವನ, ನಾನು ಗಾಂಧೀಜಿಯಂತೆ ಸತ್ಯ ಹೇಳುವೆನು, ಗಾಂಧೀಜಿಯ ಜೀವನ ಕಥೆಯಿಂದ ಕಲಿಯುವ ಐದು ಪಾಠಗಳು, ಗಾಂಧೀಜಿಯ ದೃಷ್ಟಿ ಯಲ್ಲಿ ನಿಜವಾದ ಸ್ವಾತಂತ್ರ್ಯ, ಸತ್ಯ ಮತ್ತು ಅಹಿಂಸೆ, ಅಸಮಾನತೆ ನಿವಾರ ಣೆಗೆ ಗಾಂಧೀಜಿಯವರ ಕೊಡುಗೆ, ನೈತಿಕ ರಾಜಕಾರಣ, ಸತ್ಯಾಗ್ರಹ - ಇಂದಿನ ಕಾಲದ ಅವಶ್ಯಕತೆ, ಗಾಂಧೀ ಜಿಯ ಶಿಕ್ಷಣ ತತ್ವ - ನೈತಿಕತೆ, ಕೌಶಲ್ಯ, ಸೇವಾಭಾವ ಹೀಗೆ ವಿವಿಧ ವಿಷಯಗಳ ಕುರಿತು ಶಾಲಾ-ಕಾಲೇಜುಗಳ ಮಕ್ಕಳಿಗೆ ಆಯೋಜಿಸಿದ ಕಲಬುರಗಿ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ 9 ಜನ ವಿದ್ಯಾರ್ಥಿಗಳಿಗೆ ಇಂದಿಲ್ಲಿ ಪ್ರಮಾಣ ಪತ್ರ ನೀಡಿ ಸತ್ಕರಿಸಲಾಯಿತು.

ಶುಕ್ರವಾರ ಕಲಬುರಗಿ ನಗರದ ಡಾ. ಎಸ್.ಎಂ.ಪಂಡಿತ್ ರಂಗ ಮಂದಿರದಲ್ಲಿ ಜರುಗಿದ ಮಹಾತ್ಮ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದಲ್ಲಿ ವಿಜೇತ ರಾಗಿದ್ದಕ್ಕಾಗಿ 9 ಜನ ವಿದ್ಯಾರ್ಥಿಗಳಿಗೆ ಜಿಲ್ಲಾಧಿಕಾರಿ ಇಕ್ರಂ ಶರೀಫ್ ಸೇರಿ ದಂತೆ ಗಣ್ಯರು ಗಾಂಧಿ ಟೋಪಿ, ನೂಲಿನ ಹಾರ ಹಾಕಿ ಪ್ರಮಾಣ ಪತ್ರ ನೀಡಿ ಗೌರವಿಸಿದರು.

ಇದಲ್ಲದೆ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಮೂರನೇ ಸ್ಥಾನ ಪಡೆದು ಜಿಲ್ಲೆಗೆ ಕೀರ್ತಿ ತಂದ ವಿದ್ಯಾರ್ಥಿನಿ ಕು. ವಿಜಯಲಕ್ಷ್ಮೀ ಲಕ್ಷ್ಮೀಕಾಂತ ಪೋತ ದಾರ ಅವರಿಗೆ ವಿಶೇಷವಾಗಿ ಸತ್ಕರಿಸಿ ಶುಭ ಕೋರಲಾಯಿತು.

ಪ್ರಬಂಧ ಸ್ಪರ್ಧೆಯಲ್ಲಿ ಪ್ರೌಢ ವಿಭಾಗದಿಂದ ವಿಜೇತರಾದ ಸಿರನೂರಿನ ಸಂತ್ ಕ್ಸೇವಿಯರ್ ಶಾಲೆಯ ಸುನೀತಾ ರೇವಣಸಿದ್ಧಪ್ಪ (ಪ್ರಥಮ), ಚಿತ್ತಾಪುರ ತಾಲೂಕಿನ ದಿಗ್ಗಾಂವ ಸರ್ಕಾರಿ ಪ್ರೌಢ ಶಾಲೆಯ ಭವಾನಿ ನಾಗಪ್ಪ (ದ್ವಿತೀಯ) ಹಾಗೂ ಇನಾಂದಾರ್ ಪಬ್ಲಿಕ್ ಸ್ಕೂಲ್‌ನ ತರುಬಾ ಆನಂ ಎಮ್.ಡಿ. ಖಾಜಾ ನಸಿರುದ್ದಿನ್ ಅವರು (ತೃತೀಯ) ಸ್ಥಾನ ಪಡೆದಿದ್ದಕ್ಕಾಗಿ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

ಅದೇ ರೀತಿ ಪದವಿ ಪೂರ್ವ ವಿಭಾಗದಿಂದ ವಿಜೇತರಾದ ಆಳಂದ ಪಟ್ಟಣದ ಎಂ.ಎ.ಆರ್.ಜಿ. ಕಾಲೇಜಿನ ವಿಜಯಲಕ್ಷ್ಮಿ ಲಕ್ಷ್ಮೀಕಾಂತ ಪೋತದಾರ (ಪ್ರಥಮ), ಇಂದಿರಾ ನಗರದ ಸಂತ ಜೋಸೆಫ್ ಕಾಲೇಜಿನ ಸ್ಪಂದನಾ ಎಲ್. (ದ್ವಿತೀಯ) ಮತ್ತು ಶಹಬಾಜ್ ವಿಜ್ಞಾನ ಕಾಲೇಜಿನ ಆದಿಬಾ ಮಹ್ವೆ? (ತೃತೀಯ) ಅವರನ್ನು ಸಹ ಸತ್ಕರಿಸಲಾಯಿತು.

ಇನ್ನು ಪದವಿ-ಸ್ನಾತಕೋತ್ತರ ವಿಭಾಗದಿಂದ ವಿಜೇತರಾದ ಬಿಬಿ ರಜಾ ಮಹಿಳಾ ಕಾಲೇಜಿನ ಅನೀಖಾ ಸುಬುಹಿ (ಪ್ರಥಮ), ಸೇಠ ಶಂಕರ್‌ಲಾಲ್ ಲಾಹೋಟಿ ಕಾನೂನು ಕಾಲೇಜಿನ ರಾಜೇಶ್ವರಿ ಮಾರುತಿ (ದ್ವಿತೀಯ) ಹಾಗೂ ಶಹಾಬಾದ್ ತಾಲೂಕಿನ ಭಂಕೂರಿನ ಕರ್ನಾಟಕ ಪದವಿ ಮಹಾವಿದ್ಯಾಲಯದ ಕಾವ್ಯ ಲಕ್ಷ್ಮೀಕಾಂತ (ತೃತೀಯ) ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ, ನೀಡಿ ಸತ್ಕರಿಸಲಾಯಿತು.

ಪಿ.ಯು ಪ್ರಾಂಶುಪಾಲರ ನೇಮಕಾತಿ: ಅನ್ಯಾಯ ಸರಿಪಡಿಸುವಂತೆ ಒತ್ತಾಯ

ಗಂಗಾವತಿ,ಅ.02-

ಕರ್ನಾಟಕ ಶಾಲಾ ಶಿಕ್ಷಣ ಅಧೀನದ ಸರಕಾರಿ ಪದವಿಪೂರ್ವ ಕಾಲೇಜುಗಳಲ್ಲಿನ ಒಟ್ಟು 247 ಗ್ರೂಪ್‌ಎ ಪ್ರಾಂಶುಪಾಲರ ಹುದ್ದೆಗಾಗಿ ಸರಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ಕೆ.ಇ.ಎ ಮೂಲಕ ಪರೀಕ್ಷೆ ನಡೆಸಲು ಅರ್ಜಿಗಳನ್ನು ಆಹ್ವಾನಿಸುವ ಮೂಲಕ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಂಡಿರುವುದು ಸ್ವಾಗತಾರ್ಹ.ಆದರೆ ಯಥಾಪ್ರಕಾರ ನಮ್ಮ ಭಾಗದವರ ಅರ್ಹತೆಯ ಆಧಾರದ ಮೇಲೆ ಕಲ್ಯಾಣ ಕರ್ನಾಟಕೇತರ ಭಾಗದಲ್ಲಿ ಲಭ್ಯವಿರುವ ಅವಕಾಶಗಳನ್ನು ನ್ಯಾಯಯುತವಾಗಿ ಬಳಸಿಕೊಳ್ಳುವಲ್ಲಿ ಮತ್ತೊಮ್ಮೆ ಅನ್ಯಾಯವಾಗಿದೆ ಎಂದು ಕಲ್ಯಾಣ ಕರ್ನಾಟಕ ಅನುಷ್ಠಾನ ಸಮಿತಿಯ ಕಾರ್ಯಾಧ್ಯಕ್ಷರಾದ ಧನರಾಜ್ ಈ. ಆರೋಪಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು ಅಧಿಸೂಚನೆಯ 247 ಹುದ್ದೆಗಲ್ಲಿ 31 ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ ಹಾಗೂ 216 ಹುದ್ದೆಗಳನ್ನು ರಾಜ್ಯ ಮಾತ್ರ ವೃಂದ ಕ್ಕೆ ಮೀಸಲಿಟ್ಟಿರುವುದು ಸರಿ ಇದೆ, ಆದರೆ ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ಅವರನ್ನು 31 ಹುದ್ದೆಗಳಿಗೆ ಮಾತ್ರ ಸೀಮಿತಗೊಳಿಸುವ ನಿರ್ಣಯ ಹಾಗೂ ತಂತ್ರಜ್ಞಾನ ಅಳವಡಿಕೆಯು ಸಂವಿಧಾನದ ಮೂಲ ಮೀಸಲಾತಿ ನಿಯಮಕ್ಕೆ ವಿರುದ್ಧವಾಗಿದ್ದು, ನಮ್ಮ ಭಾಗದ ಪ್ರತಿಭಾವಂತರಿಗೆ ಮಾಡುವ ಅನ್ಯಾಯವಾಗಿ ಎಂದು ಈ ಮೂಲಕ ತಿಳಿಸಿದಾರೆ.

ಆದ್ದರಿಂದ ಒಟ್ಟು 247 ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಿ, ಒಂದೇ ಪರೀಕ್ಷೆಯಲ್ಲಿ ನಮ್ಮ ಭಾಗದ ಅಭ್ಯರ್ಥಿಗಳನ್ನು ಮೊದಲು ರಾಜ್ಯಮಟ್ಟದಲ್ಲಿ ಪರಿಗಣಿಸಿ, ಅರ್ಹರನ್ನು ಆಯ್ಕೆ ಮಾಡಿ, ನಂತರ ಉಳಿದವರನ್ನು ಸ್ಥಳೀಯ ವೃಂದಕ್ಕೆ ಪರಿಗಣಿಸಲು ಸರ್ಕಾರವನ್ನು ಆಗ್ರಹಿಸಿದ್ದಾರೆ. ಈ ನಿಟ್ಟನಲ್ಲಿ ನಮ್ಮ ಭಾಗದ ಪಿ.ಯು ಉಪನ್ಯಾಸಕರು ಸಂಘದ

ಸಿಂಧನೂರು:ಜೆಇ ನಾಗರಾಜ ಅಮಾನತುಗೊಳಿಸಿ ಸಿಇಓ ಆದೇಶ

ಸಿಂಧನೂರು,ಅ.2

ಮೇಲಾಧಿಕಾರಿಗಳ ಯಾವುದೇ ಅಧಿಕೃತ ಆದೇಶವಿಲ್ಲದಿದ್ದರೂ ಸಹ ಸಹಾಯಕ ಕಾರ್ಯನಿರ್ವಾಹಕ ಎಂಜನಿಯರ್ ಹುದ್ದೆಯ ಅಧಿಕಾರ ಚಲಾಯಿಸಿರುವುದು ಸೇರಿ ಗಂಭೀರ ಸ್ವರೂಪದ ಆರೋಪಗಳನ್ನು ಎದುರಿಸುತ್ತಿರುವ ನಗರದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ ಕಚೇರಿಯಲ್ಲಿ ಕಿರಿಯ ಎಂಜನಿಯರ್ ಆಗಿದ್ದ ನಾಗರಾಜ ಪ್ರಭಾ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರಕುಮಾರ ಕಾಂದೂ ಆದೇಶ ಹೊರಡಿಸಿದ್ದಾರೆ.

ನಾಗರಾಜ ಪ್ರಭಾ ಹಿರಿಯ ಅಧಿಕಾರಿಗಳ ಆದೇಶವಿಲ್ಲದೆ ಹಣಕಾಸು ಅಧಿಕಾರ ಚಲಾಯಿಸಿರುವ ಜೊತೆಗೆ ಪೂರ್ಣ ಪ್ರಮಾಣದ ಸಹಾಯಕ ಕಾರ್ಯನಿರ್ವಾಹಕ ಎಂಜನಿಯರ್ ಕರ್ತವ್ಯಕ್ಕೆ ಹಾಜರಾದ ನಂತರವೂ ಎಸ್‌ಬಿಆರ್‌ನಲ್ಲಿ ಸಹಾಯಕ ಕಾರ್ಯನಿರ್ವಾಹಕ ಎಂಜನಿಯರ್‌ನಂತೆ ಸಹಿ ಮಾಡಿ ಅಧಿಕಾರ ವ್ಯಾಪ್ತಿ ಮೀರಿ ಕಾರ್ಯನಿರ್ವಹಿಸಿದ್ದಾರೆ. ಸಿಟಿಸಿಯಲ್ಲಿ 20.6.2026 ರವರೆಗೆ ಒಟ್ಟು 18 ಬಿಲ್ಲುಗಳಿಗೆ ಅವರು ರುಜು ಮಾಡಿರುವುದು ಕಂಡು ಬಂದಿದೆ. ಈ ಪೈಕಿ 12 ಬಿಲ್ಲುಗಳಿಗೆ ಎಇಇ ಆಗಿದ್ದ ಶ್ಯಾಮ್‌ಸುಂದರ ಕಾಳೇಕರ್ ಸಹಿ ಮಾಡಿದ ಬಳಿಕವೂ 6 ಬಿಲ್ಲುಗಳಿಗೆ ನಾಗರಾಜ ಪ್ರಭಾ ಸಹಿ ಮಾಡಿರುವುದು ಬೆಳಕಿಗೆ ಬಂದಿದೆ. ಸೆಪ್ಟೆಂಬರ್ 21, 2026 ರಂದು ವಿಭಾಗ ಕಚೇರಿಗೆ ಬಂದು ಸಿಬ್ಬಂದಿ ಊಟಕ್ಕೆ ತೆರಳಿದ ಸಂದರ್ಭದಲ್ಲಿ 1.9.2026 ರಿಂದ 21.9.2026 ರವರೆಗೆ ತಾವು ಕರ್ತವ್ಯಕ್ಕೆ ಹಾಜರಿದ್ದುದಾಗಿ ದಾಖಲಿಸಿದ್ದಾರೆ. ಮತ್ತೊಂದೆಡೆ ಇಲಾಖೆಯ ನೋಟಿಸ್‌ಗೆ ಉತ್ತರಿಸಿಲ್ಲ. ರಜೆ ಅರ್ಜಿ ಸಲ್ಲಿಸದೆ ಕೇಂದ್ರ ಸ್ಥಾನ ತೊರೆದಿರುವ ಅವರು ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿರುವುದು ಪ್ರಾಥಮಿಕ ತನಿಖೆಯಲ್ಲಿ ದೃಢಪಟ್ಟಿದೆ. ಸೆ.24 ರಂದು ಮಧ್ಯರಾತ್ರಿ 12.05ಕ್ಕೆ ಆತ್ಮಹತ್ಯೆಗೆ ಪ್ರಯತ್ನಿಸುವಂತಹ ಛಾಯಾಚಿತ್ರಗಳನ್ನು ಕಾರ್ಯನಿರ್ವಾಹಕ ಎಂಜನಿಯರ್ಗೆ ಕಳುಹಿಸಿರುವುದು ಕಂಡು ಬಂದಿದೆ. ಈ ಎಲ್ಲ ಅಂಶಗಳನ್ನು ಗಮನಿಸಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರಕುಮಾರ ಕಾಂದೂ ಅವರು ನಾಗರಾಜ ಪ್ರಭಾ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಒಂದನೇಯ ಪುಟದಿಂದ

ದಸರಾ ಗಿಫ್ಟ್: ವಂದೇ ಭಾರತ್ ಸ್ಲೀಪರ್ ರೈಲು ಕ.ಕರ್ನಾಟಕ ಮಾರ್ಗದಲ್ಲಿ ಲಭ್ಯ: ಡಾ.ಬಾಬುರಾವ್

ಪ್ರತಿದಿನ ರಾತ್ರಿ 10 ಗಂಟೆಗೆ ಬೆಂಗಳೂರಿನಲ್ಲಿ ಹೊರಟು ಮರುದಿನ ಮಧ್ಯಾಹ್ನ 1.50ಕ್ಕೆ ಮುಂಬೈ ತಲುಪುತ್ತದೆ. ಮುಂಬೈನಿಂದ ರಾತ್ರಿ 10.30ಕ್ಕೆ ಹೊರಡುವ ಈ ವಂದೇ ಭಾರತ ಸ್ಲೀಪರ್ ರೈಲು (ರೈಲು ಸಂಖ್ಯೆ 27651)

ಮರುದಿನ ಮಧ್ಯಾಹ್ನ 2.50ಕ್ಕೆ ಬೆಂಗಳೂರು ತಲುಪುತ್ತದೆ. ಒಟ್ಟು 16 ಗಂಟೆಗಳ ಸಮಯ ತೆಗೆದುಕೊಳ್ಳುತ್ತದೆ.

ಬೆಂಗಳೂರು – ಮುಂಬೈ ವಂದೇ ಭಾರತ್ ಸ್ಲೀಪರ್ ರೈಲು ಮಾರ್ಗ ಮಧ್ಯದಲ್ಲಿ ಆಂಧ್ರಪ್ರದೇಶದಲ್ಲಿರುವ ಅನಂತಪುರ, ಗುಂತಕಲ್ ನಿಲ್ದಾಣಗಳಲ್ಲಿ ನಿಲ್ಲುತ್ತದೆ. ಜೊತೆಗೆ ಕರ್ನಾಟಕದ ರಾಯಚೂರು, ಕಲಬುರಗಿ ಹಾಗೂ ಮಹಾರಾಷ್ಟ್ರ ದ ಸೋಲಾಪುರ, ಪುಣೆ ನಿಲ್ದಾಣಗಳಲ್ಲಿ ನಿಲುಗಡೆಯಾಗುತ್ತದೆ ಎಂದು ತಿಳಿಸಿದ್ದಾರೆ.

ಪ್ರಸ್ತುತ ಮುಂಬೈ–ಬೆಂಗಳೂರು ನಗರಗಳ ಮಧ್ಯೆ ಉದ್ಯಾನ್ ಎಕ್ಸ್‌ಪ್ರೆಸ್ ಈಗಾಗಲೇ ಸಂಚರಿಸುತ್ತಿದೆ. ಈ ರೈಲು 24ಗಂಟೆಗಳ ಪ್ರಯಾಣದ ಸಮಯ ತೆಗೆದುಕೊಳ್ಳುತ್ತಿದೆ. ಈ ವಂದೇ ಭಾರತ್ ಸ್ಲೀಪರ್ ರೈಲು ಸೌಲಭ್ಯದಿಂದ 8 ತಾಸುಗಳ ಅಮೂಲ್ಯ ಸಮಯ ಉಳಿಯಲಿದೆ.

ಪಶ್ಚಿಮ ಬಂಗಾಳದಲ್ಲಿನ ಹೌರಾ – ಅಸ್ಸಾಂನಲ್ಲಿನ ಗುವಾಹಟಿ (ಕಾಮಾಖ್ಯ) ನಡುವೆ ಮೊದಲ ವಂದೇ ಭಾರತ್ ಸ್ಲೀಪರ್ ರೈಲು ಈ ವರ್ಷದ ಜನವರಿಯಲ್ಲಿ ಪ್ರಯಾಣಿಕರಿಗೆ ಲಭ್ಯವಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಎಂದಿದ್ದಾರೆ.

ಈ ರೈಲನ್ನು ಕಲಬುರಗಿ ಮಾರ್ಗವಾಗಿಯೇ ಓಡಿಸಬೇಕೆಂದು ರೈಲ್ವೆ ಸಚಿವರಿಗೆ ಮನವಿ ಸಲ್ಲಿಸಿ ಮನವರಿಕೆ ಮಾಡಲಾಗಿದ್ದು ಈಗ ಫಲ ನೀಡಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

ಕಲ್ಯಾಣ ಕರ್ನಾಟಕದ ಜನರು ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಮನವಿ ಮಾಡಿಕೊಂಡಿರುವ ಅವರು ಈ ಸೌಲಭ್ಯ ಒದಗಿಸಿರುವ ಪ್ರಧಾನಿ ನರೇಂದ್ರ ಮೋದಿ, ರೇಲ್ವೆ ಸಚಿವರಾದ ಅಶ್ವಿನಿ ವೈಷ್ಣವ ಹಾಗೂ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಅಭಿನಂದನಾರ್ಹರು ಎಂದಿದ್ದಾರೆ.

ಎಲ್.ವಿ.ಡಿ ಮಹಾವಿದ್ಯಾಲಯದಲ್ಲಿ ರಕ್ತ ದಾನಿಗಳ ದಿನಾಚರಣೆ

ರಾಯಚೂರು,ಅ.02–

ತಾರಾನಾಥ ಶಿಕ್ಷಣ ಸಂಸ್ಥೆಯ ಎಲ್‌ವಿಡಿ ಮಹಾವಿದ್ಯಾಲಯದಲ್ಲಿ ಯುತ್ ರೆಡ್‌ಕ್ರಾಸ ಘಟಕದಿಂದ ರಕ್ತ ದಾನಿಗಳ ದಿನದ ಅಂಗವಾಗಿ ರಕ್ತದಾನದ ಮಹತ್ವ ಮತ್ತು ಅದರ ಅಗತ್ಯತೆಯ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ವಿಶೇಷ ರಕ್ತದಾನ ಜಾಗೃತಿ ಕಾರ್ಯಕ್ರಮ ಗುರುವಾರ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಸಂಪನ್ಮೂಲ ವ್ಯಕ್ತಿ ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಮಲ್ಲಣ್ಣ ಅವರು, ರಕ್ತದಾನ ಮಹಾದಾನವಾಗಿದ್ದು, ಒಬ್ಬ ವ್ಯಕ್ತಿ ನೀಡುವ ರಕ್ತವು ಮತ್ತೊಬ್ಬರ ಜೀವ ಉಳಿಸು ವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಹೇಳಿದರು.

ಅಪಘಾತಕ್ಕೊಳಗಾದವರು, ಶಸ್ತ್ರ ಚಿಕಿತ್ಸೆ ಗೆ ಒಳಗಾಗುವವರು, ಗರ್ಭಿಣಿಯರು ಹಾಗೂ ವಿವಿಧ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ತುರ್ತು ಸಂದರ್ಭದಲ್ಲಿ ರಕ್ತದ ಅವಶ್ಯಕತೆ ಉಂಟಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸ್ವಯಂ ಪ್ರೇರಿತ ರಕ್ತದಾನಿಗಳ ಪಾತ್ರ ಮಹತ್ವವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಸಹಾಯಕ ಪ್ರಾಧ್ಯಾಪಕ ಡಾ. ಮಂಜುನಾಥ. ಕೆ, ಅವರು ಮಾತನಾಡಿ,ರಕ್ತದಾನ ಮಾಡುವವರ ಆರ್ಹತೆ, ರಕ್ತದಾನದ ಮುನ್ನೆಚ್ಚರಿಕೆಗಳು, ರಕ್ತದಾನದ ನಂತರ ಪಾಲಿಸಬೇಕಾದ ಕ್ರಮಗಳು, ರಕ್ತದ ಗುಂಪುಗಳ ಮಹತ್ವ ಹಾಗೂ ರಕ್ತವನ್ನು ಸುರಕ್ಷಿತವಾಗಿ ಸಂಗ್ರಹಿಸುವ ವಿಧಾನಗಳ ಕುರಿತು ಮಾಹಿತಿ ನೀಡಿದರು.

ವೇದಿಕೆಯ ಮೇಲೆ ಯುತ್ ರೆಡ್‌ಕ್ರಾಸ್ ಘಟಕಾಧಿಕಾರಿಗಳು ಹಣಮಂತ್ರಾಯ ಸಹಾಯಕ ಪ್ರಾಧ್ಯಾಪಕರು ಪ್ರಾಣಿಶಾಸ್ತ್ರ ವಿಭಾಗ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ.ಮಂಜುನಾಥ ಪಾಟೀಲ್ ಹಾಗೂ ಹಿಂದಿ ವಿಭಾಗದ ಮುಖ್ಯಸ್ಥರಾದ ಡಾ.ಅರುಣಾ ಹಿರೇಮಠ ಉಪಸ್ಥಿತರಿದ್ದರು. ಕುಮಾರಿ.ದೇವಿಕಾ ಕಾರ್ಯಕ್ರಮ ನಿರೂಪಿಸಿದರು. ಕುಮಾರಿ. ಮಧುಶ್ರೀ ಸ್ವಾಗತಿಸದರು. ಕುಮಾರಿ. ರಕ್ಷಿತಾ ವಂದಿಸಿದರು.

ಗಾಂಧೀಜಿ, ಶಾಸ್ತ್ರೀಜಿ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ: ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ



ವಿಜಯನಗರ ,ಅ.02–

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರ ತತ್ವ, ಆದರ್ಶ ಹಾಗೂ ಚಿಂತನೆಗಳನ್ನು ಕೇವಲ ಜಯಂತಿ ಆಚರಣೆಗೆ ಸೀಮಿತಗೊಳಿಸದೆ, ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಹೇಳಿದರು. ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾಡಳಿತ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಆಯೋಜಿಸಿದ್ದ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀಜಿ ಜಯಂತಿ ಕಾರ್ಯಕ್ರಮದಲ್ಲಿ ಇಬ್ಬರು ಮಹನೀಯರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ಗಾಂಧೀಜಿ ಹಾಗೂ ಶಾಸ್ತ್ರೀಜಿ ಅವರು ತೋರಿಸಿಕೊಟ್ಟ ಮಾರ್ಗದಲ್ಲಿ ಸಾಗುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಗಾಂಧೀಜಿ ಕಂಡ 'ಗ್ರಾಮ ಸ್ವರಾಜ್ಯ'ದ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಸರ್ಕಾರದ ಜೊತೆಗೆ ಸಮಾಜದ ಪ್ರತಿಯೊಬ್ಬ ನಾಗರಿಕರೂ ಕೈಜೋಡಿಸಬೇಕು ಎಂದು ಅವರು ಕರೆ ನೀಡಿದರು. ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಮಾತನಾಡಿ, ಸರಳ ಜೀವನ ಹಾಗೂ ಉನ್ನತ ಆಲೋಚನೆ ಗಾಂಧೀಜಿ ಮತ್ತು ಶಾಸ್ತ್ರೀಜಿ ಅವರ ಜೀವನದ ಪ್ರಮುಖ ತತ್ವಗಳಾಗಿದ್ದವು. ತಲುಪಬೇಕಾದ ಗುರಿ ಉತ್ತಮವಾಗಿರುವುದರ ಜೊತೆಗೆ, ಆ ಗುರಿ ತಲುಪುವ ಮಾರ್ಗವೂ ಅಷ್ಟೇ ಶ್ರೇಷ್ಠವಾಗಿರಬೇಕು ಎಂಬುದನ್ನು ಮಹಾತ್ಮರು ತಮ್ಮ ಬದುಕಿನ ಮೂಲಕ ತೋರಿಸಿಕೊಟ್ಟಿದ್ದಾರೆ. ಅವರ ತತ್ವ ಮತ್ತು ಚಿಂತನೆಗಳನ್ನು ಪ್ರತಿಯೊಬ್ಬರೂ ರೂಢಿಸಿಕೊಳ್ಳಬೇಕು ಎಂದರು.

ಬಾಪೂಜಿ ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ: ಇದೇ ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಆಯೋಜಿಸಿದ್ದ ಬಾಪೂಜಿ ಪ್ರಬಂಧ ಸ್ಪರ್ಧೆಯ ಪ್ರೌಢಶಾಲೆ ವಿಭಾಗದಲ್ಲಿ ಬಿ.ಎಸ್.ಪ್ರಸನ್ನ, ಸುಮಯ್ಯ ಭಾನು, ಮಲ್ಲಮ್ಮ, ಪದವಿ ಪೂರ್ವ ವಿಭಾಗದಲ್ಲಿ ಜ್ಯೋತಿ, ಜಿ.ದೀಕ್ಷಿತ, ಎಸ್.ಕವಿತಾ ಹಾಗೂ ಪದವಿ ವಿಭಾಗದ ಆರ್.ಸಂಜನಾ, ಅನಿತಾ.ಡಿ, ಈ.ಉಮಾದೇವಿ ವಿದ್ಯಾರ್ಥಿಗಳು ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಲ್ಲಿ ಅನುಕ್ರಮವಾಗಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ಹಾಗೂ ಗೌರವ ಸಂಭಾವನೆ ವಿತರಿಸಿ ಗೌರವಿಸಲಾಯಿತು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಬಳ್ಳಾರಿಯಲ್ಲಿ ಮಹಾತ್ಮ ಗಾಂಧೀಜಿಯವರ 157 ನೇ ಜಯಂತ್ಯೋತ್ಸವ

ಸರ್ವಧರ್ಮ ಸಮನ್ವಯದ ಸಂದೇಶ ಸಾರಿದ ಮಹಾತ್ಮ: ಡಿಸಿ ನಾಗೇಂದ್ರ ಪ್ರಸಾದ್.ಕೆ



ಬಳ್ಳಾರಿ,ಅ.02–

ಭಗವದ್ಗೀತೆ, ಕುರಾನ್ ಹಾಗೂ ಬೈಬಲ್ ಸೇರಿದಂತೆ ಎಲ್ಲಾ ಧರ್ಮ ಗ್ರಂಥಗಳ ಮೂಲ ಸಾರ ಸತ್ಯ, ಪರಸ್ಪರ ಗೌರವ ಹಾಗೂ ಪ್ರೀತಿಯಿಂದ ಬಾಳುವುದು. ಗಾಂಧೀಜಿಯವರು ಇವುಗಳನ್ನು ಕೇವಲ ಬೋಧನೆ ಮಾಡದೆ, ತಮ್ಮ ಸ್ವಂತ ಜೀವನದಲ್ಲೇ ಅಳವಡಿಸಿಕೊಂಡು ಜೀವಿಸಿದ ಮಹಾತ್ಮರಾಗಿದ್ದಾರೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ. ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಂಯುಕ್ತಾಶ್ರಯದಲ್ಲಿ ನಗರದ ರೈಲು ನಿಲ್ದಾಣದ ಎದುರುಗಡೆ ಇರುವ ಹಳೇ ಜಿಲ್ಲಾಧಿಕಾರಿಗಳ ಕಚೇರಿ ಆವರಣದ ಗಾಂಧಿ ಭವನ ದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮಹಾತ್ಮ ಗಾಂಧೀಜಿಯವರ 157ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ, ಕಾರ್ಯಕ್ರಮವನ್ನು ಯಾವುದೇ ಅದ್ದೂರಿತನವಿಲ್ಲದೆ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ಗಾಂಧೀಜಿಯವರು ಹುಟ್ಟಿನಿಂದಲೇ ಸಂತರಾಗಿರಲಿಲ್ಲ; ಅವರೂ ತಪ್ಪುಗಳನ್ನು ಮಾಡಿದ್ದರು. ಆದರೆ ಪ್ರತಿಯೊಬ್ಬ ಮನುಷ್ಯನಿಗೂ ತನ್ನ ತಪ್ಪುಗಳನ್ನು ತಿದ್ದಿಕೊಂಡು ಸತ್ಯದ ಹಾದಿಯಲ್ಲಿ ನಡೆಯುವ ಅವಕಾಶ ವಿದೆ ಎಂಬುದನ್ನು ಅವರ ಜೀವನ ತೋರಿಸಿಕೊಟ್ಟಿದೆ. ಸುಳ್ಳಿನ ಹಾದಿ ಸುಲಭವೆನಿಸಿದರೂ, ಅಂತಿಮವಾಗಿ ಸತ್ಯ ಮತ್ತು ಸರಳ ಜೀವನವೇ ನಿಜವಾದ ಸಂತೋಷ ನೀಡುತ್ತದೆ ಎಂದರು.

ಪಾಶ್ಚಾತ್ಯ ವ್ಯಾಮೋಹಗಳಿಂದ ಮುಕ್ತರಾಗಿ ಸನ್ಮಾರ್ಗದಲ್ಲಿ ಸಾಗು ವುದೇ ಎಲ್ಲ ತತ್ವಶಾಸ್ತ್ರಗಳ ಸಾರ ವಾಗಿದೆ. ಇಂದಿನ ಆಧುನಿಕ ಯುಗದ ಯುವಪೀಳಿಗೆ ಗಾಂಧೀಜಿಯವರ ತತ್ವಾದರ್ಶ ಹಾಗೂ ಜೀವನ ಮೌಲ್ಯ ಗಳನ್ನು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ಕೃತಕ ಬುದ್ಧಿ ಮತ್ತೆ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಇಂದಿನ ದಿನಗಳಲ್ಲಿ ಮಹಾತ್ಮ ಗಾಂಧೀಜಿಯವರ ಜೀವನ ಮೌಲ್ಯಗಳು ಹಾಗೂ ತತ್ವಗಳು ಹಿಂದೆಂದಿಗಿಂತಲೂ ಹೆಚ್ಚು ಪ್ರಸ್ತುತವಾಗಿವೆ ಎಂದು ಹೇಳಿದರು.

ಗಾಂಧೀಜಿಯವರು ಅಂದೇ ಸುಸ್ಥಿರ ಅಭಿವೃದ್ಧಿ ಕುರಿತು ಪ್ರತಿಪಾದಿಸಿದ್ದರು. ಪ್ರಸ್ತುತ ಜಗತ್ತು ಎದುರಿಸುತ್ತಿರುವ ಹವಾಮಾನ ವೈಪರೀತ್ಯ ಸಮಸ್ಯೆಗೆ ಅವರ ಪರಿಸರಸ್ನೇಹಿ ಚಿಂತನೆಗಳು ಇಂದಿಗೂ ಪ್ರಮುಖ ಮಾರ್ಗದರ್ಶಿಯಾಗಿವೆ. ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆಯ ಆಗಮನದಿಂದ ಉದ್ಯೋಗ ಕಡಿತದ ಆತಂಕ ಎದುರಾಗಿರುವ ಈ ಕಾಲಘಟ್ಟದಲ್ಲಿ, ಮಾನವ ಶ್ರಮ ಮತ್ತು ಕೌಶಲ್ಯಗಳ ಮಹತ್ವದ ಬಗ್ಗೆ ಗಾಂಧೀಜಿ ಅಂದೇ ಎಚ್ಚರಿಸಿದ್ದರು. ನೂತನ ತಂತ್ರಜ್ಞಾನವನ್ನು ನೈತಿಕವಾಗಿ ಸಮಾಜಕ್ಕೆ ಪೂರಕವಾಗಿ ಅಳವಡಿಸಿಕೊಳ್ಳಲು ಗಾಂಧಿ ತತ್ವಗಳು ಅತ್ಯಗತ್ಯ. ಅವರ ಸರಳತೆ ಮತ್ತು 'ಸ್ಥಿತಪ್ರಜ್ಞ' ವ್ಯಕ್ತಿತ್ವವು ಇಂದಿನ ಒತ್ತಡದ ಬದುಕಿನಲ್ಲಿ ಮಾನಸಿಕ ಸಮತೋಲನ ಕಾಯ್ದುಕೊಳ್ಳಲು ಮಾದರಿಯಾಗಿದೆ ಎಂದರು.

ಯಾವುದೇ ಬದಲಾವಣೆ ಮೊದಲು ನಮ್ಮೊಳಗಿಂದಲೇ ಶುರುವಾಗಬೇಕು ಎಂಬ ಗಾಂಧೀಜಿಯವರ ಮಾತು ಸ್ವಚ್ಛತೆ ಸೇರಿದಂತೆ ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. ಸಮಾಜದ ಬದಲಾವಣೆಗೆ ಬೇರೆಯ ವರನ್ನು ಕಾಯುವ ಬದಲು, ಜವಾಬ್ದಾರಿಯನ್ನು ನಾವೇ ವಹಿಸಿಕೊಳ್ಳಬೇಕು. ದೇಶದ ಯುವಶಕ್ತಿ ಗಾಂಧೀಜಿಯವರ ನೈತಿಕ ಮೌಲ್ಯಗಳನ್ನು ತಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿ ಕೊಂಡು, ಬದಲಾವಣೆಯನ್ನು ತಮ್ಮಿಂದಲೇ ಆರಂಭಿಸುವ ಮೂಲಕ ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಅವರು ಕರೆ ನೀಡಿ ದರು.

ಮಹಾತ್ಮ ಗಾಂಧೀಜಿಯವರ ಜೀವನ ಚರಿತ್ರೆ ಕುರಿತು ಬಳ್ಳಾರಿಯ ಸತ್ಯಂ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಆಲಂಬಾಷ ಅವರು ವಿಶೇಷ ಉಪನ್ಯಾಸ ನೀಡಿದರು.

ಇದಕ್ಕೂ ಮುನ್ನ, ಮಹಾತ್ಮ ಗಾಂಧೀ ಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ಸರ್ವಧರ್ಮ ಗ್ರಂಥಗಳ ಬೋಧನೆ ಮಾಡಿದ್ದು, ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಎನ್., ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ಸಹಾಯಕ ಆಯುಕ್ತ ಹೆಚ್.ಡಿ. ರಾಜೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾ ಸಹಾಯಕ ವಿ.ಸಿ.ಗುರುರಾಜ್, ಪ್ರದಸ ನವೀನ್ ಕುಮಾರ್.ಜಿ., ಸಿಬ್ಬಂದಿಗಳಾದ ಹನುಮೇಶ್.ಹೆಚ್., ವಿಜಯ್ ಕುಮಾರ್, ಮಲ್ಲೇಶಪ್ಪ, ಹನುಮಂತಪ್ಪ, ರೋಜಮೇರಿ, ಮುತ್ತಣ್ಣ ಸೇರಿದಂತೆ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಮಹಾತ್ಮ ಗಾಂಧೀಜಿ ಜಯಂತಿ 2026ರ ಅಂಗವಾಗಿ ಬಳ್ಳಾರಿ ಜಿಲ್ಲಾ ಮಟ್ಟದಲ್ಲಿ ಆಯೋಜಿಸಲಾಗಿದ್ದ ಬಾಪೂಜಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನ, ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.

ಪ್ರೌಢಶಾಲೆ, ಪದವಿ ಪೂರ್ವ ಹಾಗೂ ಪದವಿ/ಸ್ನಾತಕೋತ್ತರ ಪದವಿ ವಿಭಾಗಗಳಲ್ಲಿ ಪ್ರಬಂಧಗಳನ್ನು ಮೌಲ್ಯಮಾಪನ ಮಾಡಿ, ಪ್ರಥಮ (ರೂ. 3,000), ದ್ವಿತೀಯ (ರೂ. 2,000) ಹಾಗೂ ತೃತೀಯ (ರೂ. 1,000) ಸ್ಥಾನ ಪಡೆದ ವಿಜೇತರನ್ನು ಆಯ್ಕೆ ಮಾಡಲಾಗಿದೆ.

ವಿಜೇತರ ವಿವರ:

ಪ್ರೌಢಶಾಲಾ ವಿಭಾಗ: ಪ್ರಥಮ ಸ್ಥಾನ: ಕೆ. ಕಾವೇರಿ (ಸರ್ಕಾರಿ ಪ್ರೌಢಶಾಲೆ, ದೇವಸಮುದ್ರ, ಕಂಪ್ಲಿ ತಾಲ್ಲೂಕು)

ದ್ವಿತೀಯ ಸ್ಥಾನ: ಕೆ. ಚಂದಸ್ವಿನಿ (ಎಸ್.ಇ.ಎಸ್. ಬಾಲಕಿಯರ ಸರ್ಕಾರಿ ಪ್ರೌಢಶಾಲೆ, ಸಂಡೂರು)

ತೃತೀಯ ಸ್ಥಾನ: ಸಾಕ್ಷಿ (ಸರ್ಕಾರಿ ಪ್ರೌಢಶಾಲೆ, ಜವುಕು, ಕಂಪ್ಲಿ ತಾಲ್ಲೂಕು). ಪದವಿ ಪೂರ್ವ ಕಾಲೇಜು ವಿಭಾಗ: ಪ್ರಥಮ ಸ್ಥಾನ: ವಿನೋದ್ (ಸರ್ಕಾರಿ ಮಾ.ಪು ಪದವಿ ಪೂರ್ವ ಕಾಲೇಜು, ಬಳ್ಳಾರಿ)

ದ್ವಿತೀಯ ಸ್ಥಾನ: ಹೆಚ್. ಹೊನ್ನೂರುಸ್ವಾಮಿ (ಸರ್ಕಾರಿ ಮಾ.ಪು ಪದವಿ ಪೂರ್ವ ಕಾಲೇಜು, ಬಳ್ಳಾರಿ) ತೃತೀಯ ಸ್ಥಾನ: ಉದಯ್ (ಸರ್ಕಾರಿ ಮಾ.ಪು ಪದವಿ ಪೂರ್ವ ಕಾಲೇಜು, ಬಳ್ಳಾರಿ).

ಪದವಿ / ಸ್ನಾತಕೋತ್ತರ ಪದವಿ ವಿಭಾಗ: ಪ್ರಥಮ ಸ್ಥಾನ: ಬಿ. ಸುಷ್ಮಾ (ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಂಪ್ಲಿ) ದ್ವಿತೀಯ ಸ್ಥಾನ: ತಲಸೀಮಾ (ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಂಪ್ಲಿ) ತೃತೀಯ ಸ್ಥಾನ: ಕೆ. ಸಹನಾ (ವಿಜಯನಗರ ಶ್ರೀ ಕೃಷ್ಣದೇವ ರಾಯ ವಿಶ್ವವಿದ್ಯಾಲಯ).

ಕಲ್ಬುರ್ಗಿ ವಿಭಾಗಮಟ್ಟದ ಯೋಗಸ್ಪರ್ಧೆ: 16 ಯೋಗ ಪಟುಗಳು ರಾಜ್ಯ ಮಟ್ಟಕ್ಕೆ

ರಾಯಚೂರು,ಅ.2–

ಕರ್ನಾಟಕ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ದಸರಾ ಕ್ರೀಡಾಕೂಟಗಳಲ್ಲಿ ಕಲ್ಬುರ್ಗಿ ವಿಭಾಗ ಮಟ್ಟದ ಯೋಗ ಸ್ಪರ್ಧೆಗಳನ್ನು ರಾಯಚೂರು ಜಿಲ್ಲೆಯ ನಗರದ ಮಹಾತ್ಮ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಯೋಗ ಸ್ಪರ್ಧೆಗಳು ನಾಲ್ಕು ವಿಧಗಳಲ್ಲಿ ಅಂದರೆ ಸಾಂಪ್ರದಾಯಿಕ ಯೋಗ ಸ್ಪರ್ಧೆ, ಕಲಾತ್ಮಕ ವ್ಯಯಕ್ತಿಕ ಯೋಗ ಸ್ಪರ್ಧೆ, ಕಲಾತ್ಮಕ ಜೋಡಿ ಯೋಗ ಸ್ಪರ್ಧೆ, ಲಯಬದ್ಧ ಜೋಡಿ ಯೋಗ ಸ್ಪರ್ಧೆಗಳು ನಡೆದವು. ಈ ಯೋಗ ಸ್ಪರ್ಧೆಗಳಲ್ಲಿ ಗುಲ್ಬರ್ಗ, ಬೀದರ್, ಯಾದಗಿರಿ, ರಾಯಚೂರು, ವಿಜಯನಗರ, ಕೊಪ್ಪಳ, ಮತ್ತು ಬಳ್ಳಾರಿ ಜಿಲ್ಲೆಗಳಿಂದ ಒಟ್ಟು 74 ಯೋಗ ಪಟುಗಳು ಭಾಗವಹಿಸಿದ್ದರು.

16 ಯೋಗ ಪಟುಗಳು ವೈಯಕ್ತಿಕ ಯೋಗ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಮತ್ತು ದ್ವಿತೀಯ ಸ್ಥಾನ ಪಡೆದು, ಜೋಡಿ ಯೋಗ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಈ ಯೋಗ ಸ್ಪರ್ಧೆಗಳಲ್ಲಿ ವಿಜೇತರಾಗಿ ಆಯ್ಕೆಯಾದ ಸಾಂಪ್ರದಾಯಿಕ ಯೋಗ ಸ್ಪರ್ಧೆಯ ಮಹಿಳೆಯರ ವಿಭಾಗದಲ್ಲಿ ಧನುಶ್ರೀ ಪ್ರಥಮ ಸ್ಥಾನ ವಿಜಯನಗರ ಜಿಲ್ಲೆ, ನಾಗಮ್ಮ ದ್ವಿತೀಯ ಸ್ಥಾನ ವಿಜಯನಗರ ಜಿಲ್ಲೆ, ಪುರುಷರ ವಿಭಾಗದಲ್ಲಿ ಮಹೇಶ್ ಪ್ರಥಮ ಸ್ಥಾನ ಯಾದಗಿರಿ ಜಿಲ್ಲೆ, ಗಿರಿರಾಜ ದ್ವಿತೀಯ ಸ್ಥಾನ ಬಳ್ಳಾರಿ ಜಿಲ್ಲೆ, ಕಲಾತ್ಮಕ ವ್ಯಯಕ್ತಿಕ ಯೋಗ ಸ್ಪರ್ಧೆಯ ಮಹಿಳೆಯರ ವಿಭಾಗದಲ್ಲಿ ಕೆ ಎನ್ ಕುಸುಮಾ ಪ್ರಥಮ ಸ್ಥಾನ ವಿಜಯನಗರ ಜಿಲ್ಲೆ, ನಿಹಾರಿಕ ದ್ವಿತೀಯ ಸ್ಥಾನ ಕೊಪ್ಪಳ ಜಿಲ್ಲೆ, ಪುರುಷರ ವಿಭಾಗದಲ್ಲಿ ಸ್ವರೂಪ್ ವಿ ಚಿತ್ರಗಾರ ಪ್ರಥಮ ಸ್ಥಾನ ಕೊಪ್ಪಳ ಜಿಲ್ಲೆ, ಡಿ ಮಧುಸೂದನ್ ರೆಡ್ಡಿ ದ್ವಿತೀಯ ಸ್ಥಾನ, ಪಡೆದಿದ್ದಾರೆ.

ಆಹಾರ ನಷ್ಟ ಮತ್ತು ವ್ಯರ್ಥ ಕುರಿತು ಜಾಗೃತಿ ಜಾಥಾ



ರಾಯಚೂರು,ಅ.2–

ಆಹಾರ ನಷ್ಟ ಮತ್ತು' ವ್ಯರ್ಥ ಕುರಿತು ನಗರದ ಕೃಷಿ ವಿಶ್ವ ವಿದ್ಯಾಲಯದಲ್ಲಿ ಕಾಲ್ನಡಿಗೆ ಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಕೃಷಿ ತಾಂತ್ರಿಕ ಮಹಾವಿದ್ಯಾಲಯದ ಡೀನ್‌ರಾದ ಡಾ. ಕೆ. ವಿ. ಪ್ರಕಾಶ್ ಅವರು ಮಾತನಾಡಿ, ಭಾರತದಲ್ಲಿ ಆಹಾರ ನಷ್ಟ ಮತ್ತು ವ್ಯರ್ಥವು ಗಂಭೀರ ಸವಾಲಾಗಿದ್ದು, ಅನ್ನದ ಪ್ರತಿಯೊಂದು ಕಣವೂ ಅಮೂಲ್ಯವಾಗಿರುವುದರಿಂದ ಹೊಲದಿಂದ ಊಟದ ಮೇಜಿನವರೆಗೆ ಆಹಾರ ನಷ್ಟವನ್ನು ಕಡಿಮೆ ಮಾಡಿ, ಆಹಾರ ವ್ಯರ್ಥವನ್ನು ತಡೆದು, ರೈತನ ಶ್ರಮಕ್ಕೆ ಗೌರವ ನೀಡುತ್ತಾ ಆಹಾರವನ್ನು ಉಳಿಸಿ, ಸುಸ್ಥಿರ ಭವಿಷ್ಯವನ್ನು ನಿರ್ಮಿಸುವುದು ನಮ್ಮೆಲ್ಲರ ಮತ್ತು ಕೃಷಿ ತಾಂತ್ರಿಕ ವಿಜ್ಞಾನಿಗಳ ಜವಾಬ್ದಾ ರಿಯಾಗಿದೆ ಎಂದು ಹೇಳಿದರು.

ಡಾ. ಉದಯಕುಮಾರ್ ನಿಡೋಣಿ ಮಾತನಾಡಿ, ಆಹಾರ ನಷ್ಟ ಮತ್ತು ಆಹಾರ ವ್ಯರ್ಥವು ಆಹಾರ ಭದ್ರತೆ, ರೈತರ ಆದಾಯ, ಪರಿಸರ ಹಾಗೂ ದೇಶದ ಆರ್ಥಿಕತೆಗೆ ಪರಿಣಾಮ ಬೀರುವ ಪ್ರಮುಖ ಸಮಸ್ಯೆಯಾಗಿದೆ.

ಹೊಲದಿಂದ ಗ್ರಾಹಕರ ತಟ್ಟೆಯವರೆಗೆ ಆಹಾರದ ಪ್ರತಿಯೊಂದು ಹಂತದಲ್ಲೂ ನಷ್ಟವನ್ನು ಕಡಿಮೆ ಮಾಡುವುದು ಮತ್ತು ಬಳಕೆಯಾಗದೆ ಉಳಿದ ಆಹಾರವನ್ನು ವ್ಯರ್ಥವಾಗದಂತೆ ತಡೆಯಬೇಕು. ಇದಕ್ಕಾಗಿ ಸುಧಾರಿತ ಕೊಯ್ಲು ವಿಧಾನಗಳು, ವೈಜ್ಞಾನಿಕ ಸಂಗ್ರಹಣೆ, ಶೀತ ಸರಪಳಿ ವ್ಯವಸ್ಥೆ, ಸೂಕ್ತ ಪ್ಯಾಕೇಜಿಂಗ್ ಮತ್ತು ಪರಿಣಾಮಕಾರಿ ಸಾರಿಗೆ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಮನೆಗಳು, ಹೋಟೆಲ್‌ಗಳು, ಶಾಲೆಗಳು ಮತ್ತು ಸಾರ್ವಜನಿಕ ಸಮಾರಂಭಗಳಲ್ಲಿ ಅಗತ್ಯವಿರುವಷ್ಟು ಮಾತ್ರ ಆಹಾರವನ್ನು ತಯಾರಿಸಿ, ಉಳಿದ ಆಹಾರವನ್ನು ಸಮರ್ಪಕ ವಾಗಿ ಸಂಗ್ರಹಿಸಿ ಅಗತ್ಯವಿರುವವರಿಗೆ ಹಂಚಬೇಕು. ಹಾಳಾಗುವ ಆಹಾರವನ್ನು ಆಹಾರ ಉಳಿಸಿ ರೈತನ ಶ್ರಮಕ್ಕೆ ಗೌರವ ನೀಡಿ ಪರಿಸರ ಸಂರಕ್ಷಿಸುವ ಮನೋಭಾವವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳುವುದರಿಂದ ಆಹಾರ ನಷ್ಟ ಮತ್ತು ವ್ಯರ್ಥವನ್ನು ಗಣನೀಯವಾಗಿ ಕಡಿಮೆ ಮಾಡಿ ಸುಸ್ಥಿರ ಆಹಾರ ವ್ಯವಸ್ಥೆಯನ್ನು ನಿರ್ಮಿಸಬಹುದು ಎಂದು ಹೇಳಿದರು.

ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ಸಿಬ್ಬಂದಿ ವರ್ಗದವರು ಆಹಾರ ನಷ್ಟ ಮತ್ತು ಆಹಾರ ಪೋಲು ತಡೆಗೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ದೃಢ ನಿಶ್ಚಯದ ಪ್ರತಿಜ್ಞಾವಿಧಿ ಯನ್ನು ಪ್ರಾಧ್ಯಾಪಕರಾದ ಡಾ. ಪಿ.ಎಫ್. ಮಠದ ಅವರು ಬೋಧಿಸಿದರು.

ವಿದ್ಯಾರ್ಥಿಗಳು ಸೇರಿದಂತೆ ಮಹಾವಿದ್ಯಾಲಯದ ಸಿಬ್ಬಂದಿ ವರ್ಗದವರು ಆಹಾರ ನಷ್ಟ ಮತ್ತು ಆಹಾರ ವ್ಯರ್ಥ ಕುರಿತು ಕೈಫಲಕಗಳನ್ನು ಹಿಡಿದು ಕಾಲ್ನಡಿಗೆ ಜಾಥಾವನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಸಿಜಾಗೃತಿ ಮೂಡಿಸಿದರು.

ವನ್ಯಜೀವಿ ರಕ್ಷಿಸುವುದು ನಮ್ಮೆಲ್ಲರ ಹೊಣೆ: ಆರ್.ಎಲ್. ಕುಲಕರ್ಣಿ



ಬಾಗಲಕೋಟೆ,ಅ.03–

ವಿದ್ಯಾರ್ಥಿಗಳು ಸೇವಾ ಮನೋಭಾವದೊಂದಿಗೆ ಪರಿಸರ ಸಂರಕ್ಷಣೆಯ ಕಾಳಜಿಯನ್ನು ಬೆಳೆಸಿಕೊಳ್ಳಬೇಕು. ವನ್ಯಜೀವಿಗಳನ್ನು ರಕ್ಷಿಸುವುದು ನಮ್ಮೆಲ್ಲರ ಹೊಣೆ ಎಂದು ಅರಣ್ಯಾಧಿಕಾರಿ ಆರ್.ಎಲ್. ಕುಲಕರ್ಣಿ ಹೇಳಿದರು.

ನಗರದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ ಹಾಗೂ ಅರಣ್ಯ ಇಲಾಖೆ, ಬಾಗಲಕೋಟೆ ಇವರ ಸಹಯೋಗದಲ್ಲಿ ಮಹಾತ್ಮ ಗಾಂಧೀಜಿಯವರ ಜನ್ಮದಿನದ ಅಂಗವಾಗಿ ಅರಣ್ಯ ಇಲಾಖೆಯ ಉದ್ಯಾನವನದಲ್ಲಿ ಆಯೋಜಿಸಿದ್ದ ಸ್ವಚ್ಛತಾ ಆಂದೋಲನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದವರು ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ವಿದ್ಯಾರ್ಥಿಗಳು ಹಾಗೂ ಯುವಕರು ಸ್ವಯಂ ಪ್ರೇರಿತರಾಗಿ ಸಮಾಜಮುಖಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಪರಿಸರದ ಬಗ್ಗೆ ಕಾಳಜಿ ವಹಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಕಾರ್ಯಕ್ರಮದ ಅಂಗವಾಗಿ ಅರಣ್ಯ ಇಲಾಖೆಯ ಉದ್ಯಾನವನದಲ್ಲಿ ವಿದ್ಯಾರ್ಥಿಗಳು ಹಾಗೂ ಸ್ವಯಂಸೇವಕರು ಶ್ರಮದಾನ ನಡೆಸಿ ಸ್ವಚ್ಛತಾ ಕಾರ್ಯ ಕೈಗೊಂಡರು. ಈ ಮೂಲಕ ಪರಿಸರ ಸಂರಕ್ಷಣೆ ಹಾಗೂ ಸ್ವಚ್ಛತೆಯ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ, ಪದವಿ ವಿಜ್ಞಾನ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಘಟಕ 1ರ ಕಾರ್ಯಕ್ರಮಾಧಿಕಾರಿ ಶಿವಾನಂದ ಶಿವನಗುತ್ತಿ, ಘಟಕ 2ರ ಕಾರ್ಯಕ್ರಮಾಧಿಕಾರಿ ಎಸ್.ಕೆ. ಜಾಹಗೀರದಾರ, ಎನ್‌ಸಿಸಿಯ ಸಿಟಿಓ ಗಿರೀಶ ಕರಿಹೊನ್ನ, ಎನ್‌ಸಿಸಿ ಹಾಗೂ ಎನ್‌ಎಸ್‌ಎಸ್ ಸ್ವಯಂ ಸೇವಕರು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಸಂಸದೀಯ ಸಮಿತಿ ಸಭೆಯಿಂದ ಸುಪ್ರೀಂ ಕೋರ್ಟ್ ಹಿಂದೆ ಸರಿದದ್ದು ಸ್ವಾಗತಾರ್ಹ!

ಸಂವಿಧಾನದ 143ನೇ ವಿಧಿಯಡಿ ಸಂಸದೀಯ ಸಮಿತಿಯು ಮಹತ್ವದ ಕಾನೂನು ರೂಪಿಸುವಾಗ, ಸುಪ್ರೀಂ ಕೋರ್ಟ್‌ನ ಸಲಹೆ ಪಡಯಬೇಕಿದ್ದರೆ, ರಾಷ್ಟ್ರಪತಿಗೆ ಅದನ್ನು ತಿಳಿಸಿ, ಅವರಿಂದ ಅನುಮತಿ ಪಡೆದು, ನ್ಯಾಯಾಂಗದ ಜೊತೆಗೆ ಮುಕ್ತ ಚರ್ಚೆ ನಡೆಸಲು ಅವಕಾಶ ನೀಡಲಾಗಿದೆ. ಇಂತಹ ಪಾರದರ್ಶಕ ಸಾಂವಿಧಾನಿಕ ಮಾರ್ಗವಿರುವಾಗ, ಸಂಸದೀಯ ಸಮಿತಿಯು ಮುಚ್ಚಿದ ಬಾಗಿಲಲ್ಲಿ 'ಅನೌಪಚಾರಿಕ' ಮಾತುಕತೆಗೆ ಮುಂದಾಗಿದ್ದು ಅಸಂವಿಧಾನಿಕ ಕ್ರಮ/ಧೋರಣೆ.

ಒಂದು ದೇಶ-ಒಂದು ಚುನಾವಣೆ ಎಂಬುದು ಕೇವಲ ಚುನಾವಣೆಯ ದಿನಾಂಕಗಳನ್ನು ಒಂದೇ ದಿನಕ್ಕೆ ತರುವ ಆಡಳಿತಾತ್ಮಕ ಪ್ರಯೋಗ ಮಾತ್ರವಲ್ಲ. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳ ಅವಧಿ, ರಾಜ್ಯಗಳ ರಾಜಕೀಯ ಸ್ವಾಯತ್ತತೆ, ಚುನಾವಣಾ ಆಯೋಗದ ಅಧಿಕಾರ ಹಾಗೂ ಭಾರತದ ಒಕ್ಕೂಟ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವ ಗಂಭೀರ ಸಂವಿಧಾನಾತ್ಮಕ ಬದಲಾವಣೆ.

ಇಂತಹ ಮಸೂದೆಯನ್ನು ಪರಿಶೀಲಿಸುತ್ತಿರುವ ಜಂಟಿ ಸಂಸದೀಯ ಸಮಿತಿ, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಮತ್ತು ಹಾಲಿ ನ್ಯಾಯಮೂರ್ತಿಗಳ ಜೊತೆ ಅನೌಪಚಾರಿಕ ಚರ್ಚೆ ನಡೆಸಲು ಮುಂದಾಗಿತ್ತು. ಅಕ್ಟೋಬರ್ 6ರಂದು ಈ ಸಂವಾದ ನಡೆಯಲಿದೆ ಎಂಬುದು ನ್ಯಾಯಾಲಯದ ಕಾರ್ಯಕ್ರಮ ಪಟ್ಟಿಯಲ್ಲಿ ಉಲ್ಲೇಖವಾಗಿತ್ತು. ಇದೀಗ, ಆ ಚರ್ಚೆಯನ್ನು ರದ್ದುಗೊಳಿಸಲಾಗಿದೆ. ಪ್ರಸ್ತಾವಿತ ತಿದ್ದುಪಡಿ ಮಸೂದೆಯು ನ್ಯಾಯಾಂಗ ಪರಿಶೀಲನೆಯ ವಿಷಯವಾಗಿ ನ್ಯಾಯಾಲಯದ ಮೆಟ್ಟಿಲು ಏರುವ ಸಾಧ್ಯತೆ ಇದೆ. ಹೀಗಿರುವಾಗ, ಈ ವಿಚಾರವಾಗಿ ಸಂಸದೀಯ ಸಮಿತಿಯೊಂದಿಗೆ ನ್ಯಾಯಾಧೀಶರು ಚರ್ಚಿಸುವುದು ಸೂಕ್ತವಲ್ಲ ಎಂದು ನ್ಯಾಯಾಲಯ ಹೇಳಿದೆ. ನ್ಯಾಯಾಲಯದ ಈ ಕ್ರಮ ಸ್ವಾಗತಾರ್ಹ.

ಆದಾಗ್ಯೂ, ಚರ್ಚೆ ಈಗ ರದ್ದಾಗಿರಬಹುದು. ಆದರೆ, ಅಂತಹದೊಂದು ವಿಷಯದಲ್ಲಿ ನ್ಯಾಯಾಂಗ ಮತ್ತು ಕಾರ್ಯಾಂಗ ಚರ್ಚೆಗೆ ಮುಂದಾಗಿದ್ದವು ಎಂಬುದೇ ಕಳವಳಕಾರಿ. ಯಾಕೆಂದರೆ, ಸಂಸತ್ತು ರೂಪಿಸುವ ಕಾನೂನಿನ ಸಂವಿಧಾನಬದ್ಧತೆಯನ್ನು ಪರೀಕ್ಷಿಸುವುದೇ ಸುಪ್ರೀಂ ಕೋರ್ಟ್. ಹೀಗಿದ್ದಾಗ, ಕಾನೂನು ರೂಪಿಸುವವರು ಮಸೂದೆ ರೂಪುಗಳ್ಳುವ ಹಂತದಲ್ಲಿಯೇ ನ್ಯಾಯಮೂರ್ತಿಗಳ ಬಳಿಗೇ ಹೋಗಿ, ಆ ಬಗ್ಗೆ ಮಾತುಕತೆ ನಡೆಸಿದರೆ, ನಾಳೆ ಆ ಕಾನೂನನ್ನು ಪ್ರಶ್ನಿಸಿ ಸಲ್ಲಿಕೆಯಾಗುವ ಅರ್ಜಿಗಳ ಪರಿಸ್ಥಿತಿ ಏನಾಗಬಹುದು? ನ್ಯಾಯಾಂಗದ ಸ್ವಾತಂತ್ರ್ಯ ಎಲ್ಲಿಗೆ ಹೋಗಿ ನಿಲ್ಲಬಹುದು?

ಇದೇ ಪ್ರಶ್ನೆಯನ್ನು ಹಿರಿಯ ನ್ಯಾಯವಾದಿ ಕಪಿಲ್ ಸಿಬಲ್ ಕೂಡ ಎತ್ತಿದ್ದಾರೆ. ಮುಖ್ಯವಾಗಿ, ನ್ಯಾಯಾಂಗದ ಸ್ವಾತಂತ್ರ್ಯ ಎಂದರೆ ನ್ಯಾಯಮೂರ್ತಿಗೆ ಯಾರೂ ಫೋನ್ ಮಾಡಬಾರದು ಎನ್ನುವಷ್ಟು ಸಣ್ಣ ಕಲ್ಪನೆಯಲ್ಲ; ನ್ಯಾಯಾಧೀಶರು ತೀರ್ಪು ನೀಡುವ ಮೊದಲು ಯಾವ ರಾಜಕೀಯ ಅಥವಾ ಶಾಸನಾತ್ಮಕ ಪ್ರಕ್ರಿಯೆಯ ಭಾಗವಾಗಿದ್ದರೂ ಎಂಬ ಅನುಮಾನವೇ ಬಾರದಂತೆ ಕಾರ್ಯನಿರ್ವಹಿಸಬೇಕು.

ಭಾರತದ ಸಂವಿಧಾನವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗವನ್ನು ರೂಪಿಸಿದೆ. ಪ್ರತಿಯೊಂದಕ್ಕೂ ತನ್ನದೇ ಕಾರ್ಯವ್ಯಾಪ್ತಿಯನ್ನು ನಿಗದಿಪಡಿಸಿದೆ. 1955ರ ರಾಮ್ ಜವಾಯ ಕಪೂರ್ ಪಂಜಾಬ್ ರಾಜ್ಯ ಪ್ರಕರಣದಲ್ಲಿಯೂ ಸುಪ್ರೀಂ ಕೋರ್ಟ್, ''ಮೂರು ಅಂಗಗಳ ಕಾರ್ಯಕ್ಷೇತ್ರಗಳು ಸ್ಪಷ್ಟವಾಗಿ ವಿಭಜಿಸಲ್ಪಟ್ಟಿದ್ದು, ಒಂದು ಅಂಗವು ಇನ್ನೊಂದರ ಮೂಲ ಕಾರ್ಯವನ್ನು ಆಕ್ರಮಿಸಿಕೊಳ್ಳುವುದನ್ನು ಸಂವಿಧಾನ ಒಪ್ಪುವುದಿಲ್ಲ'' ಎಂದು ಸ್ಪಷ್ಟವಾಗಿ ಹೇಳಿತ್ತು.

ಮುಂದೆ, ಕೇಶವಾನಂದ ಭಾರತಿ, ಇಂದಿರಾ ಗಾಂಧಿ ರಾಜ್ ನಾರಾಯಣ್ ಸೇರಿದಂತೆ ಹಲವು ತೀರ್ಪುಗಳಲ್ಲಿ ಅಧಿಕಾರ ವಿಭಜನೆ ಮತ್ತು ನ್ಯಾಯಾಂಗ ಪರಿಶೀಲನೆಯ ತತ್ವಗಳು ಸಂವಿಧಾನದ ಮೂಲ ರಚನೆಯ ಭಾಗವೆಂದು ಕೋರ್ಟ್ ಸ್ಪಷ್ಟಪಡಿಸಿದೆ. 2015ರ ಎನ್‌ಜೆಎಸಿ ತೀರ್ಪಿನಲ್ಲಿಯೂ ನ್ಯಾಯಾಂಗದ ಸ್ವಾತಂತ್ರ್ಯವೂ ಮೂಲ ವ್ಯವಸ್ಥೆಯ ಅವಿಭಾಜ್ಯ ಅಂಗವೆಂದು ಸುಪ್ರೀಂ ಕೋರ್ಟ್ ಪುನರುಚ್ಚರಿಸಿದ್ದಿದೆ.

ಇದೆಲ್ಲವೂ, ನ್ಯಾಯಾಂಗ ಮತ್ತು ಕಾರ್ಯಾಂಗ/ಶಾಸಕಾಂಗ ಜಂಟಿಯಾಗಿ ಕಾರ್ಯನಿರ್ವಹಿಸದೆ, ತಮ್ಮದೇ ಚೌಕಟ್ಟಿನೊಳಗೆ ಕಾರ್ಯಾಚರಿಸಬೇಕು ಎಂಬುದನ್ನು ಸ್ಪಷ್ಟವಾಗಿ ಹೇಳುತ್ತಿವೆ. ಆದಾಗ್ಯೂ, ಸಂವಿಧಾನಾತ್ಮಕ ಸಂಸ್ಥೆಗಳ ನಡುವೆ ಆಡಳಿತಾತ್ಮಕ ಸಂಪರ್ಕ, ಅಧ್ಯಯನ ಭೇಟಿ ಅಥವಾ ಸೌಜನ್ಯದ ಸಂವಾದಗಳು ನಡೆಯಲು, ಸಂಸದೀಯ ಸಮಿತಿಯು ನಿವೃತ್ತ ನ್ಯಾಯಾಧೀಶರು ಅಥವಾ ಕಾನೂನು ತಜ್ಞರ ಅಭಿಪ್ರಾಯ ಆಲಿಸಲು ಅವಕಾಶವೂ ಇದೆ. ಆದರೂ, ಅಲ್ಲಿ ಸ್ಪಷ್ಟ ಗೆರೆಯೂ ಇರಬೇಕು. ಭವಿಷ್ಯದಲ್ಲಿ ನ್ಯಾಯಾಂಗದ ಮುಂದೆ ಬರಬಹುದಾದ, ಸಿಂಧುತ್ವದ ಬಗ್ಗೆ ಪರಿಶೀಲಿಸಬೇಕಾದ ವಿಚಾರಗಳ ಕುರಿತು ಮೊದಲೇ ನ್ಯಾಯಾಂಗ ಮತ್ತು ಶಾಸಕಾಂಗ ಜೊತೆಗಾಗಿ ಅನೌಪಚಾರಿಕ ಸಭೆ/ಚರ್ಚೆ ನಡೆಸಲು ಮುಂದಾದರೆ, ಅದು ನ್ಯಾಯಾಂಗದ ನಿಷ್ಪಕ್ಷಪಾತತೆ ಮತ್ತು ನ್ಯಾಯಾಂಗ-ಶಾಸಕಾಂಗ ನಡುವಿನ ಗಡಿಯನ್ನು ಅಸ್ಪಷ್ಟಗೊಳಿಸುತ್ತದೆ.

ನ್ಯಾಯದ ಮೂಲತತ್ವ ಬಹಳ ಸರಳ: ನ್ಯಾಯ ದೊರೆಯುವುದು ಮಾತ್ರವಲ್ಲ, ನ್ಯಾಯ ದೊರೆಯುತ್ತಿದೆ ಎಂಬ ವಿಶ್ವಾಸವೂ ಸಾರ್ವಜನಿಕರಲ್ಲಿ ಮೂಡಬೇಕು. 1997ರಲ್ಲಿ ಸುಪ್ರೀಂ ಕೋರ್ಟ್ ಅಂಗೀಕರಿಸಿದ ನ್ಯಾಯಾಂಗ ಮೌಲ್ಯಗಳ ಪುನರುಚ್ಚಾರ ಸಂಹಿತೆಯ ಮೊದಲ ತತ್ವ ಹೇಳುವಂತೆ, ನ್ಯಾಯಾಂಗದ ನಿಷ್ಪಕ್ಷಪಾತತೆಯ ಮೇಲಿನ ಸಾರ್ವಜನಿಕ ವಿಶ್ವಾಸವನ್ನು ಕುಂದಿಸುವ ಯಾವುದೇ ವರ್ತನೆಯನ್ನು ನ್ಯಾಯಾಧೀಶರು ತಪ್ಪಿಸಬೇಕು.

ಅದೇ ಸಂಹಿತೆಯ 8ನೇ ತತ್ವ ಇನ್ನೂ ಸ್ಪಷ್ಟವಾಗಿದೆ: ಮುಂದೆ ನ್ಯಾಯಾಂಗ ಪರಿಶೀಲನೆಗೆ ಬರಬಹುದಾದ ವಿಷಯಗಳ ಕುರಿತು ನ್ಯಾಯಾಧೀಶರು ಸಾರ್ವಜನಿಕವಾಗಿ ಅಭಿಪ್ರಾಯ ವ್ಯಕ್ತಪಡಿಸಬಾರದು. ಈ ಸ್ವಯಂ ನಿಯಮವನ್ನು ನ್ಯಾಯಾಂಗವೇ ತನಗೆ ತಾನೇ ವಿಧಿಸಿಕೊಂಡಿದೆ.

ಅದೇ ರೀತಿ, ಸಂವಿಧಾನದ 143ನೇ ವಿಧಿಯಡಿ ಸಂಸದೀಯ ಸಮಿತಿಯು ಮಹತ್ವದ ಕಾನೂನು ರೂಪಿಸುವಾಗ, ಸುಪ್ರೀಂ ಕೋರ್ಟ್‌ನ ಸಲಹೆ ಪಡಯಬೇಕಿದ್ದರೆ, ರಾಷ್ಟ್ರಪತಿಗೆ ಅದನ್ನು ತಿಳಿಸಿ, ಅವರಿಂದ ಅನುಮತಿ ಪಡೆದು, ನ್ಯಾಯಾಂಗದ ಜೊತೆಗೆ ಮುಕ್ತ ಚರ್ಚೆ ನಡೆಸಲು ಅವಕಾಶ ನೀಡಲಾಗಿದೆ. ಇಂತಹ ಪಾರದರ್ಶಕ ಸಾಂವಿಧಾನಿಕ ಮಾರ್ಗವಿರುವಾಗ, ಸಂಸದೀಯ ಸಮಿತಿಯು ಮುಚ್ಚಿದ ಬಾಗಿಲಲ್ಲಿ ಅನೌಪಚಾರಿಕ ಮಾತುಕತೆಗೆ ಮುಂದಾಗಿದ್ದು ಅಸಂವಿಧಾನಿಕ ಕ್ರಮ/ಧೋರಣೆ.

ಆದ್ದರಿಂದಲೇ, ಒಂದು ದೇಶ - ಒಂದು ಚುನಾವಣೆ ವಿಚಾರ ಕುರಿತಾದ ಸಂಸದೀಯ ಸಮಿತಿ ಮತ್ತು ನ್ಯಾಯಾಂಗ ನಡುವಿನ ಚರ್ಚೆಗಳ ಕುರಿತು ಪ್ರಶ್ನೆಗಳು ಎದ್ದಿದ್ದವು. ಇದೀಗ, ನ್ಯಾಯಾಲಯವು ಸಭೆಯನ್ನು ರದ್ದುಗೊಳಿಸಿದೆ. ಆದರೆ, ಅದಕ್ಕೂ ಮುನ್ನ ಸಂಸದೀಯ ಸಮಿತಿ ನೀಡಿದ ಕಾರಣಗಳು ವಿರೋಧಾಭಾಸವಾಗಿದ್ದವು. ಆರಂಭದಲ್ಲಿ, ದಿನಾಂಕ ಹೊಂದಾಣಿಕೆಯಾಗಲಿಲ್ಲ ಎಂದೂ, ನಂತರ ಇದು ಕೇವಲ ಗ್ರಂಥಾಲಯ ವೀಕ್ಷಣೆಯ ಭೇಟಿ ಎಂದೂ ಸಮಿತಿ ಸುಳ್ಳು ಸಮರ್ಥನೆಗಳನ್ನು ನೀಡಿತು. ಆದರೆ, ಕಾರ್ಯಕ್ರಮದ ಅಧಿಕೃತ ಪಟ್ಟಿಯಲ್ಲಿ ಸಮಕಾಲೀನ ಚುನಾವಣೆ ಕುರಿತ ಚರ್ಚೆ ಎಂದು ಉಲ್ಲೇಖವಾಗಿತ್ತು.

ಒಂದು ದೇಶಒಂದು ಚುನಾವಣೆ ಮಸೂದೆಯು ಸಣ್ಣ ತಿದ್ದುಪಡಿಯಲ್ಲ. ಪ್ರಸ್ತಾವಿತ 129ನೇ ತಿದ್ದುಪಡಿಯು ಹೊಸ 82 ವಿಧಿಯನ್ನು ಸೇರಿಸುವ ಮೂಲಕ, ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆ ಚುನಾವಣೆಗಳನ್ನು ಒಂದೇ ಸಮಯಕ್ಕೆ ನಿಗದಿ ಮಾಡುವ ದೊಡ್ಡ ಸಂಚು ಹೊಂದಿವೆ. ಇದರಿಂದಾಗಿ, ಅವಧಿಗೂ ಮುನ್ನ ಸದನ ವಿಸರ್ಜನೆ, ವಿಧಾನಸಭೆಗಳ ಅವಧಿ, ಜನಾದೇಶದ ಸ್ವರೂಪ, ರಾಜ್ಯಗಳ ಸ್ವಾಯತ್ತತೆ, ಚುನಾವಣಾ ಆಯೋಗದ ಅಧಿಕಾರ ಹಾಗೂ ಮತ್ತು ಒಕ್ಕೂಟ ವ್ಯವಸ್ಥೆಯ ಮೂಲ ತತ್ವದ ಕುರಿತು ಗಂಭೀರ ಪ್ರಶ್ನೆಗಳು ಮತ್ತು ಚರ್ಚೆಗಳು ಮುನ್ನೆಲೆಗೆ ಬರುತ್ತವೆ. ಸಾಂವಿಧಾನಿಕ ಸಿಂಧುತ್ವದ ಪ್ರಶ್ನೆಗಳೂ ಏಳುತ್ತವೆ. ಇಂತಹ ಮಸೂದೆಯ ಕುರಿತು ತೀರ್ಪು ನೀಡಬೇಕಾದವರ ಜೊತೆ ಅದನ್ನು ರೂಪಿಸುತ್ತಿರುವ ಸಮಿತಿ ಮುಂಚೆಯೇ ಸಂವಾದ ನಡೆಸುವುದು ಅಪಾಯಕಾರಿ.

ಇದೀಗ, ಸುಪ್ರೀಂ ಕೋರ್ಟ್ ಈ ಚರ್ಚೆಯಿಂದ ಹಿಂದೆ ಸರಿದಿದೆ. ಆದಾಗ್ಯೂ, ಈ ಬೆಳವಣಿಗೆಯಿಂದ ಸರ್ಕಾರವೂ ಸಂಸತ್ತೂ ಒಂದು ವಿಚಾರವನ್ನು ಅರಿತುಕೊಳ್ಳಬೇಕು. ಸರ್ಕಾರ/ಸಂಸದೀಯ ಸಮಿತಿಯು ನ್ಯಾಯಾಂಗದ ಜೊತೆ ಅತಿಯಾದ ಆಡಳಿತಾತ್ಮಕ ಆತ್ಮೀಯತೆ, ಪೂರ್ವಭಾವಿ ಸಂವಾದ, ಭವಿಷ್ಯದ ವಿವಾದಗಳ ಕುರಿತು ಅನೌಪಚಾರಿಕ ಮಾತುಕತೆ ನಡೆಸುವುದು ಸಾರ್ವಜನಿಕ ಅನುಮಾನ ಹುಟ್ಟುಹಾಕುತ್ತವೆ. ಇದು, ನ್ಯಾಯಾಂಗದ ಮೇಲಿನ ಜನಾಭಿಪ್ರಾಯ ಮತ್ತು ವಿಶ್ವಾಸವನ್ನು ಕುಂದಿಸುತ್ತವೆ.

ಸಂಸತ್ತಿಗೆ ಕಾನೂನು ಮಾಡುವ ಹಕ್ಕಿದೆ. ಸರ್ಕಾರಕ್ಕೆ ಅದರ ಪರವಾಗಿ ವಾದಿಸುವ ಸ್ವಾತಂತ್ರ್ಯವಿದೆ. ವಿರೋಧ ಪಕ್ಷಗಳಿಗೆ ಅದನ್ನು ಪರಾಮರ್ಶಿಸುವ ಅಧಿಕಾರವಿದೆ. ಆದರೆ, ಆ ಕಾನೂನು ಸಂವಿಧಾನದ ಗಡಿ ದಾಟಿದೆಯೇ-ಇಲ್ಲವೇ ಎಂಬುದನ್ನು ಅಂತಿಮವಾಗಿ ತೀರ್ಮಾನಿಸುವ ಹಕ್ಕು ನ್ಯಾಯಾಂಗಕ್ಕಿದೆ. ಆ ತೀರ್ಪು ನೀಡುವ ನ್ಯಾಯಾಧೀಶರಿಗೆ ಮಸೂದೆಯ ಕುರಿತು ಅನೌಪಚಾರಿಕವಾಗಿ ಪೂರ್ವಭಾವಿಯಾಗಿಯೇ ಮಾಹಿತಿ ನೀಡುವ ಅಥವಾ ಚರ್ಚಿಸುವ ಸಂಸ್ಕೃತಿ ಬೆಳೆದರೆ, ಅದು ಪ್ರಜಾಪ್ರಭುತ್ವದ ಮೂಲ ಸ್ತಂಭವನ್ನು ಅಲುಗಾಡಿಸುತ್ತದೆ.

ಆದ್ದರಿಂದ, ಒಂದು ದೇಶ ಒಂದು ಚುನಾವಣೆ ಕುರಿತಾದ ಈ ಅನೌಪಚಾರಿಕ ಸಭೆ ರದ್ದಾದದ್ದು ಮತ್ತು ಸುಪ್ರೀಂ ಕೋರ್ಟ್ ತನ್ನ ಗಡಿಯನ್ನು ತಾನೇ ನೆನಪಿಸಿಕೊಂಡು ಹಿಂದಕ್ಕೆ ಸರಿದದ್ದು, ಸ್ವಾಗತಾರ್ಹ ಬೆಳವಣಿಗೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ವ್ಯವಸ್ಥೆಯ ವೈಫಲ್ಯಕ್ಕೆ 32 ಬೈಗಾ ಕಂದಮ್ಮಗಳ ಬಲಿ: ಬುಡಕಟ್ಟು ಮಕ್ಕಳ ಜೀವಕ್ಕೆ ಬೆಲೆ ಇಲ್ಲವೇ?



ಕೇಂದ್ರ, ರಾಜ್ಯ ಸರ್ಕಾರಗಳು ಇಂತಹ ಅಳಿದುಳಿಯುತ್ತಿರುವ ಬುಡಕಟ್ಟು ಸಮುದಾಯದ ಕಡೆಗೆ ತಮ್ಮ ಮತ ಬಾಚುವ ಕಣ್ಣು ಮುಚ್ಚಿ ತನ್ನ ಕರ್ತವ್ಯದ ಕಣ್ಣು ತೆರೆದು ನೋಡುವುದು ಅಗತ್ಯ. ಬೈಗಾ ಸಮುದಾಯದಂತಹ ಅಪರೂಪದ ಬುಡಕಟ್ಟು ಸಂತತಿಯನ್ನು ಮತ್ತು ಅವರ ಮುಂದಿನ ಪೀಳಿಗೆಯನ್ನು ರಕ್ಷಿಸುವುದು ಆಡಳಿತದ ಆದ್ಯ ಕರ್ತವ್ಯ.

ಮಧ್ಯಪ್ರದೇಶದ ಬಾಲಾಘಾಟ್ ಜಿಲ್ಲೆಯ ಅರಣ್ಯ ಹಾಗೂ ಬೆಟ್ಟಗುಡ್ಡಗಳ ಮಡಿಲಿನಲ್ಲಿ ವಾಸಿಸುವ ಬೈಗಾ () ಬುಡಕಟ್ಟು ಸಮುದಾಯದಲ್ಲಿ ಸಂಭವಿಸಿದ ಮಕ್ಕಳ ಸರಣಿ ಸಾವುಗಳು ಇಡೀ ರಾಜ್ಯವನ್ನಷ್ಟೇ ಅಲ್ಲದೆ ದೇಶವನ್ನೇ ಬೆಚ್ಚಿಬೀಳಿಸಿವೆ. ಇತ್ತೀಚಿನ ವಾರಗಳಲ್ಲಿ ಬಾಲಾಘಾಟ್‌ನ ವಿವಿಧ ಗ್ರಾಮಗಳಲ್ಲಿ ಮತ್ತು ಬುಡಕಟ್ಟು ವಸತಿಗಳಲ್ಲಿ ಸುಮಾರು 32ಕ್ಕೂ ಹೆಚ್ಚು ಬೈಗಾ ಮಕ್ಕಳು ಸಾಂಕ್ರಾಮಿಕ ರೋಗಗಳು ಹಾಗೂ ತೀವ್ರ ಅಪೌಷ್ಟಿಕತೆಗೆ ತುತ್ತಾಗಿ ಪ್ರಾಣ ಕಳೆದುಕೊಂಡಿದ್ದಾರೆ. ಈ ಘಟನೆಯು ಸರ್ಕಾರದ ನಿರ್ಲಕ್ಷ್ಯ ಮತ್ತು ಮೂಲಸೌಕರ್ಯಗಳ ಕೊರತೆಯನ್ನು ಎತ್ತಿ ತೋರಿಸಿದೆ. ಎಐ ಯುಗಕ್ಕೆ ಕಾಲಿಟ್ಟಿರುವ ಈ ದೇಶದಲ್ಲಿ ಸಾಂಕ್ರಾಮಿಕ ರೋಗಗಳ ಹರಡುವಿಕೆ ಮತ್ತು ಕಾಲಕ್ಕೆ ಸರಿಯಾಗಿ ವೈದ್ಯಕೀಯ ನೆರವು ಸಿಗದೆ ಇರುವುದೇ ಈ ಪುಟ್ಟ ಕಂದಮ್ಮಗಳ ಬಲಿಗೆ ಪ್ರಮುಖ ಕಾರಣ ಎಂಬುದು ಆಘಾತಕಾರಿ.

ಅಪರೂಪದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಮತ್ತು ಕೇಂದ್ರ ಸರ್ಕಾರದಿಂದ ವಿಶೇಷ ದುರ್ಬಲ ಬುಡಕಟ್ಟು ಗುಂಪು () ಎಂದು ಗುರುತಿಸಲ್ಪಟ್ಟಿರುವ ಬೈಗಾ ಸಮುದಾಯ. ಪ್ರಮುಖವಾಗಿ ಮಧ್ಯಪ್ರದೇಶ, ಛತ್ತೀಸ್‌ಗಢ, ಜಾರ್ಖಂಡ್ ಮತ್ತು ಉತ್ತರ ಪ್ರದೇಶದ ದಟ್ಟವಾದ ಅರಣ್ಯ ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ಸಮುದಾಯವಿದು. ಈ ಸಮುದಾಯದ ಜನಸಂಖ್ಯೆಯಲ್ಲಿ ಅತ್ಯಂತ ನಿಧಾನಗತಿಯ ಬೆಳವಣಿಗೆ ಕಂಡುಬರುತ್ತಿದೆ. ಹೀಗಿರುವಾಗ ಈ ಮಕ್ಕಳ ಸಾವು ಬೈಗಾ ಸಮುದಾಯಕ್ಕೆ ಆಘಾತ ತಂದೊಡ್ಡಿದೆ.

ಏನಿದು ಘಟನೆ, ನಡೆದಿರುವುದೇನು?

ಬಾಲಾಘಾಟ್ ಜಿಲ್ಲೆಯ ಬಿಹಾ,ರ್ ಪರಸವಾಡ ಮತ್ತು ಬೈಹಾರ್ ತಾಲೂಕಿನ ಗ್ರಾಮೀಣ ಮತ್ತು ಅರಣ್ಯ ಪ್ರದೇಶಗಳಲ್ಲಿ ಕಳೆದ ಕೆಲವು ವಾರಗಳಿಂದ ಸಾಂಕ್ರಾಮಿಕ ರೋಗದ ತೀವ್ರತೆ ಹೆಚ್ಚಾಗಿತ್ತು. ಮುಖ್ಯವಾಗಿ ಕಲುಷಿತ ನೀರು, ಮಲೇರಿಯಾ, ಡೆಂಗ್ಯೂ, ತೀವ್ರ ಭೇದಿ ಮತ್ತು ನ್ಯುಮೋನಿಯಾದಂತಹ ರೋಗಲಕ್ಷಣಗಳಿಂದ ಮಕ್ಕಳು ಬಳಲುತ್ತಿದ್ದರು.

ಈ ಬುಡಕಟ್ಟು ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು () ಬಹುದೂರದಲ್ಲಿದೆ. ರಸ್ತೆ ಸಂಪರ್ಕವೂ ಸರಿಯಾಗಿರಲಿಲ್ಲ. ಸ್ಥಳೀಯವಾಗಿ ಲಭ್ಯವಿರುವ ನಾಟಿ ಔಷಧ ಅಥವಾ ತಡವಾದ ಆಸ್ಪತ್ರೆ ದಾಖಲಾತಿಯಿಂದಾಗಿ ಮಕ್ಕಳ ಆರೋಗ್ಯ ಸ್ಥಿತಿ ಕ್ಷಣಕ್ಷಣಕ್ಕೂ ಕ್ಷೀಣಿಸಿ ಸಾವು ಸಂಭವಿಸಿದೆ. ಮೃತಪಟ್ಟ ಬಹುತೇಕ ಮಕ್ಕಳು 5 ವರ್ಷದೊಳಗಿನವರಾಗಿದ್ದು, ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿದ್ದರು. ದೇಹದಲ್ಲಿ ರೋಗನಿರೋಧಕ ಶಕ್ತಿ ಕ್ಷೀಣಿಸಿ ಸಣ್ಣಮಟ್ಟದ ಸೋಂಕು ಕೂಡ ಈ ಮಕ್ಕಳ ಜೀವಕ್ಕೆ ಕಂಟಕವಾಗಿದೆ.

ಈ ಸರಣಿ ಸಾವುಗಳ ಸುದ್ದಿ ಹೊರಬೀಳುತ್ತಿದ್ದಂತೆಯೇ ಮಧ್ಯಪ್ರದೇಶದ ಬಿಜೆಪಿ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ. ರಾಜ್ಯ ಕಾಂಗ್ರೆಸ್ ನಾಯಕರು ಹಾಗೂ ವಿರೋಧ ಪಕ್ಷದ ಮುಖಂಡರು ಮಧ್ಯಪ್ರದೇಶ ಸರ್ಕಾರ ಮತ್ತು ಆರೋಗ್ಯ ಇಲಾಖೆಯ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಸರ್ಕಾರವು ಬುಡಕಟ್ಟು ಜನರ ಕಲ್ಯಾಣಕ್ಕಾಗಿ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿದ್ದೇವೆ ಎಂದು ಸಾರುತ್ತದೆ. ಆದರೆ ವಾಸ್ತವದಲ್ಲಿ ಕನಿಷ್ಠ ಜೀವರಕ್ಷಕ ಔಷಧಗಳು ಮತ್ತು ಆಂಬುಲೆನ್ಸ್ ಸೌಲಭ್ಯವೂ ಈ ಜನರಿಗೆ ಸಿಗುತ್ತಿಲ್ಲ ಎಂಬುದು ಈ ಸರಣಿ ಸಾವಿನಿಂದ ಸ್ಪಷ್ಟವಾಗಿದೆ ಅಲ್ಲವೇ ಎಂಬ ಪ್ರಶ್ನೆಗಳು ಎತ್ತಲಾಗುತ್ತಿದೆ.

ಇನ್ನೊಂದೆಡೆ ಸಾವುಗಳಿಗೆ ಕೇವಲ ಸಾಂಕ್ರಾಮಿಕ ರೋಗವೊಂದೇ ಕಾರಣವಲ್ಲ, ಬದಲಿಗೆ ಕೆಲ ಮಕ್ಕಳಲ್ಲಿ ಹುಟ್ಟಿನಿಂದಿದ್ದ ತೊಂದರೆಗಳು ಮತ್ತು ಅಪೌಷ್ಟಿಕತೆಯೂ ಕಾರಣವಾಗಿದೆ ಎಂದು ಆಡಳಿತ ಸಮಜಾಯಿಷಿ ನೀಡಲು ಯತ್ನಿಸಿವೆ. ಆದಾಗ್ಯೂ, ಘಟನೆಗೆ ಸಂಬಂಧಿಸಿದಂತೆ ತನಿಖೆಗೆ ಆದೇಶಿಸಲಾಗಿದ್ದು, ಪ್ರದೇಶದಲ್ಲಿ ವಿಶೇಷ ವೈದ್ಯಕೀಯ ಶಿಬಿರಗಳನ್ನು ಆಯೋಜಿಸಲಾಗಿದೆ ಎಂದು ಇಲಾಖೆಯ ಉನ್ನತಾಧಿಕಾರಿಗಳು ತಿಳಿಸಿದ್ದಾರೆ.

ಬುಡಕಟ್ಟು ಮಕ್ಕಳು ಸಾಂಕ್ರಾಮಿಕಕ್ಕೆ ತುತ್ತಾಗುವುದೇಕೆ?

ಬಾಲಾಘಾಟ್‌ನ ಬೈಗಾ ಸಮುದಾಯದ ಮಕ್ಕಳು ಪದೇ ಪದೇ ಇಂತಹ ರೋಗಗಳಿಗೆ ತುತ್ತಾಗಲು ಮತ್ತು ಪ್ರಾಣ ಕಳೆದುಕೊಳ್ಳಲು ಹಲವು ದಶಕಗಳಿಂದ ನೆಲೆಸಿರುವ ಸಾಮಾಜಿಕ ಹಾಗೂ ಭೌಗೋಳಿಕ ಕಾರಣಗಳಿವೆ. ಬೆಟ್ಟಗುಡ್ಡಗಳ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರಿನ ಅಭಾವವಿದೆ. ಮಳೆಗಾಲದಲ್ಲಿ ಹಾಗೂ ನಂತರದ ದಿನಗಳಲ್ಲಿ ತೆರೆದ ಹೊಂಡ, ಹಳ್ಳ ಮತ್ತು ಬಾವಿಗಳ ಕಲುಷಿತ ನೀರನ್ನೇ ಜನ ಬಳಸುತ್ತಾರೆ. ಇದರಿಂದಾಗಿ ನೀರುಜನಿತ ರೋಗಗಳು ಶೀಘ್ರವಾಗಿ ಹರಡುತ್ತವೆ.

ಅದರಲ್ಲೂ ಬೈಗಾ ಸಮುದಾಯದಲ್ಲಿ ಬಡತನದ ಪ್ರಮಾಣ ಹೆಚ್ಚಾಗಿದೆ. ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಸೂಕ್ತ ಪೌಷ್ಟಿಕ ಆಹಾರ ಸಿಗದೆ ಹುಟ್ಟುವ ಮಗುವೂ ಅಪೌಷ್ಟಿಕತೆಯಿಂದ ಕೂಡಿರುತ್ತದೆ. ರೋಗನಿರೋಧಕ ಶಕ್ತಿ ಇಲ್ಲದಿರುವುದೇ ಸಾವುಗಳಿಗೆ ಮುಖ್ಯ ಕಾರಣ. ಆಸ್ಪತ್ರೆಗೆ ತಲುಪಲು ರಸ್ತೆಗಳಿಲ್ಲ. ರೋಗಿಗಳನ್ನು ಅಥವಾ ಮಕ್ಕಳನ್ನು ಕಾಲ್ನಡಿಗೆಯಲ್ಲೋ ಅಥವಾ ಮರದ ಜೋಲಿಗಳಲ್ಲೋ ಕಿಲೋಮೀಟರ್‌ಗಟ್ಟಲೆ ಹೊತ್ತು ತರಬೇಕಾದ ಸ್ಥಿತಿ ಇದೆ. ಗ್ರಾಮ ಮಟ್ಟದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಆಶಾ ಕಾರ್ಯಕರ್ತೆಯರ ಸೇವೆಯ ಕೊರತೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಹಾಗೂ ಜೀವರಕ್ಷಕ ಔಷಧಗಳ ಅಭಾವ ಪ್ರಮುಖ ಸಮಸ್ಯೆಯಾಗಿದೆ.

ಮೂಲಸೌಕರ್ಯ ಒದಗಿಸದ ಸರ್ಕಾರ ಹೊಣೆ ಹೊರಬೇಕಲ್ಲವೇ?

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಪ್ರಜೆಯ - ಅದರಲ್ಲೂ ದುರ್ಬಲ ವರ್ಗದವರ - ಜೀವ ರಕ್ಷಣೆ ಮಾಡುವುದು ಸರ್ಕಾರದ ಪ್ರಾಥಮಿಕ ಕರ್ತವ್ಯ. ಪಿವಿಟಿಜಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಧಾನ ಮಂತ್ರಿ ಪಿವಿಟಿಜಿ ಅಭಿವೃದ್ಧಿ ಮಿಷನ್‌ನಂತಹ ಬೃಹತ್ ಯೋಜನೆಗಳ ಮೂಲಕ ಕೋಟ್ಯಂತರ ರೂಪಾಯಿ ಅನುದಾನ ಬಿಡುಗಡೆ ಮಾಡುತ್ತಿದೆ. ಆದರೆ, ಈ ಹಣ ಎಲ್ಲಿಗೆ ಹೋಗುತ್ತಿದೆ?

ಈ ಹಣವು ಕೆಳಹಂತದಲ್ಲಿ ಸರಿಯಾಗಿ ಬಳಕೆ ಆಗುತ್ತಿಲ್ಲ ಎಂಬುದಕ್ಕೆ ಬಾಲಾಘಾಟ್‌ನಲ್ಲಿ ನಡೆದ 32 ಮಕ್ಕಳ ಸಾವೇ ಸಾಕ್ಷಿ. ಕನಿಷ್ಠ ಮಟ್ಟದ ಶುದ್ಧ ಕುಡಿಯುವ ನೀರು, ಸುಸಜ್ಜಿತ ರಸ್ತೆ, ತುರ್ತು ಅಂಬುಲೆನ್ಸ್ ಸೇವೆ ಮತ್ತು ತಾಲೂಕು ಮಟ್ಟದಲ್ಲಿ ಮಕ್ಕಳ ತೀವ್ರ ನಿಗಾ ಘಟಕಗಳನ್ನು () ಸ್ಥಾಪಿಸದಿರುವುದು ಮಧ್ಯಪ್ರದೇಶದ ಮಧ್ಯಪ್ರದೇಶ ಸರ್ಕಾರದ, ಸ್ಥಳೀಯ ಶಾಸಕರ ನಿರ್ಲಕ್ಷ್ಯವನ್ನೇ ಎತ್ತಿ ತೋರಿಸುತ್ತದೆ. ಅಧಿಕಾರಿಗಳ ಹೊಣೆಗೇಡಿತನ ಮತ್ತು ರಾಜಕೀಯ ಇಚ್ಛಾಶಕ್ತಿಯ ಕೊರತೆಯೇ ಈ ಕಂದಮ್ಮಗಳ ಬಲಿಗೆ ನೇರ ಕಾರಣ.

ಅಷ್ಟಕ್ಕೂ ಬಾಲಾಘಾಟ್‌ನಲ್ಲಿ ಸಂಭವಿಸಿದ ಬೈಗಾ ಮಕ್ಕಳ ಸರಣಿ ಸಾವುಗಳು ಕೇವಲ ಒಂದು ಸಾಂಕ್ರಾಮಿಕ ರೋಗದ ದುರಂತವಲ್ಲ, ಬದಲಿಗೆ ನಮ್ಮ ಸಮಾಜ ಮತ್ತು ಆಡಳಿತ ವ್ಯವಸ್ಥೆಯ ಕಣ್ಣು ತೆರೆಸಬೇಕಾದ ದೊಡ್ಡ ಎಚ್ಚರಿಕೆಯ ಗಂಟೆ. ಆಧುನಿಕ ಯುಗದಲ್ಲೂ ಕನಿಷ್ಠ ವೈದ್ಯಕೀಯ ಚಿಕಿತ್ಸೆ ಸಿಗದೇ ಕಂದಮ್ಮಗಳು ಪ್ರಾಣ ಬಿಡುವುದು ನಾಗರಿಕ ಸಮಾಜ ತಲೆತಗ್ಗಿಸುವಂತಹ ವಿಷಯ. ಸರ್ಕಾರಗಳು ತಕ್ಷಣವೇ ಎಚ್ಚೆತ್ತುಕೊಂಡು ತುರ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕಿದೆ.

ನೆಪ ಮಾತ್ರಕ್ಕೆ ತಾತ್ಕಾಲಿಕ ಪರಿಹಾರ ಹುಡುಕುವ ಬದಲಾಗಿ ಬುಡಕಟ್ಟು ವಸತಿಗಳಲ್ಲಿ ಶಾಶ್ವತ ಶುದ್ಧ ಕುಡಿಯುವ ನೀರಿನ ಘಟಕಗಳು, ಸುಸಜ್ಜಿತ ರಸ್ತೆ ಸಂಪರ್ಕ ಮತ್ತು 24/7 ಕಾರ್ಯನಿರ್ವಹಿಸುವ ವೈದ್ಯಕೀಯ ಶಿಬಿರಗಳನ್ನು ಸ್ಥಾಪಿಸುವುದು ಇಂದಿನ ತುರ್ತು ಅಗತ್ಯ. ಎಲ್ಲ ಕೇಂದ್ರ, ರಾಜ್ಯ ಸರ್ಕಾರಗಳು ಇಂತಹ ಅಳಿದುಳಿಯುತ್ತಿರುವ ಬುಡಕಟ್ಟು ಸಮುದಾಯದ ಕಡೆಗೆ ತಮ್ಮ ಮತ ಬಾಚುವ ಕಣ್ಣು ಮುಚ್ಚಿ ತನ್ನ ಕರ್ತವ್ಯದ ಕಣ್ಣು ತೆರೆದು ನೋಡುವುದು ಅಗತ್ಯ. ಬೈಗಾ ಸಮುದಾಯದಂತಹ ಅಪರೂಪದ ಬುಡಕಟ್ಟು ಸಂತತಿಯನ್ನು ಮತ್ತು ಅವರ ಮುಂದಿನ ಪೀಳಿಗೆಯನ್ನು ರಕ್ಷಿಸುವುದು ಆಡಳಿತದ ಆದ್ಯ ಕರ್ತವ್ಯ. ಇಲ್ಲವಾದಲ್ಲಿ, ಇಂತಹ ದುರಂತಗಳು ಪುನರಾವರ್ತನೆಯಾಗುತ್ತಲೇ ಇರುತ್ತವೆ.

ರಾಜಕೀಯದಲ್ಲಿ ಮಹಿಳೆಯರ ಮೇಲೆ ಗಂಡಾಳ್ವಿಕೆಯ ಸಾಂಸ್ಕೃತಿಕ ರಾಜಕಾರಣ

ರಾಜಕೀಯದ ಮೇಲೆ ಪುರುಷ ಪ್ರಧಾನ ಹಿಡಿತ ಹೇಗೆ ನಿರ್ಮಾಣವಾಯಿತು? ರಾಜಕೀಯವೆಂದರೆ, ಜನರ ಬದುಕಿನ ಮೇಲೆ ನಿರ್ಧಾರ ತೆಗೆದುಕೊಳ್ಳುವ ಸಾರ್ವಜನಿಕ ಕ್ಷೇತ್ರ. ಆದರೆ ಶತಮಾನಗಳ ಕಾಲ ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆ ಅದನ್ನು ಬಹುತೇಕ ಪುರುಷರ ಸ್ವಾಭಾವಿಕ ಹಕ್ಕಿನಂತೆ ರೂಪಿಸಿತು. ಅಥವಾ ''ರಾಜಕೀಯ ಪುರುಷರ ಜನ್ಮಸಿದ್ಧ ಹಕ್ಕು'' ಎಂಬ ಅಲಿಖಿತ ಧೋರಣೆ ಇಂದಿಗೂ ರಾಜಕೀಯ ಸಂಸ್ಕೃತಿಯ ಹಲವು ಪದರಗಳಲ್ಲಿ ಕಾಣಿಸಿಕೊಳ್ಳುತ್ತದೆ.

ಮನೆಯೊಳಗೆ ಯಾರು ಮಾತನಾಡಬೇಕು, ಯಾರು ನಿರ್ಧಾರ ತೆಗೆದುಕೊಳ್ಳಬೇಕು, ಯಾರು ಹಿರಿಯರ ಮಾತು ಕೇಳಬೇಕು ಎಂಬ ನಿಯಮಗಳು ಹೇಗೆ ರೂಪಿಸಲ್ಪಟ್ಟವೋ, ಅದೇ ಮನೋಭಾವ ನಿಧಾನವಾಗಿ ರಾಜಕೀಯ ಸಂಸ್ಕೃತಿಯೊಳಗೂ ಪ್ರವೇಶಿಸಿತು. ''ಮಹಿಳೆ ಮಾತನಾಡಬಹುದು; ಆದರೆ ಎಷ್ಟು ಮಾತನಾಡಬೇಕು ಎಂಬುದನ್ನು ಪುರುಷನೇ ನಿರ್ಧರಿಸಬೇಕು'' ಎಂಬ ಅಲಿಖಿತ ನಿಯಮ ರಾಜಕೀಯದಲ್ಲೂ ಕಾಣಿಸಿಕೊಳ್ಳತೊಡಗಿತು.

ಮಹಿಳೆಯರನ್ನು ರಾಜಕೀಯಕ್ಕೆ ಕರೆತರುವುದು, ಆದರೆ ಅಧಿಕಾರಕ್ಕೆ ಕರೆತಂದ ಹಾಗೆಯೇ?

ಮಹಿಳೆಯರು ರಾಜಕೀಯಕ್ಕೆ ಬಂದಾಗ ಈ ವ್ಯವಸ್ಥೆ ತಕ್ಷಣವೇ ಬದಲಾಗಲಿಲ್ಲ. ಮಹಿಳೆಯರನ್ನು ಸಭೆಗಳಿಗೆ ಕರೆತರುವುದು, ಪ್ರಚಾರಕ್ಕೆ ಬಳಸುವುದು, ಮಹಿಳಾ ಮತದಾರರನ್ನು ಸಂಘಟಿಸುವುದು, ಮನೆಮನೆಗೆ ಹೋಗಿ ಪಕ್ಷದ ಸಂದೇಶ ತಲುಪಿಸುವುದುಇವೆಲ್ಲದಲ್ಲಿ ಮಹಿಳೆಯರ ಶಕ್ತಿಯನ್ನು ರಾಜಕೀಯ ಪಕ್ಷಗಳು ಗುರುತಿಸಿದವು.

ಆದರೆ ಇಲ್ಲಿಯೇ ಗಂಡಾಳ್ವಿಕೆಯ ರಾಜಕೀಯ ಸಂಸ್ಕೃತಿಯ ಮತ್ತೊಂದು ಮುಖ ಕಾಣಿಸುತ್ತದೆ. ಮಹಿಳೆಗೆ ರಾಜಕೀಯ ಪ್ರಜ್ಞೆ ಬೆಳೆಸುವ ಬದಲು, ಆಕೆಯನ್ನು ರಾಜಕೀಯದ ಪ್ರಚಾರದ ಸರಕಾಗಿ ಬಳಸಿಕೊಳ್ಳುವುದು ಸರ್ವೇಸಾಮಾನ್ಯವಾಗಿದೆ.

ಮಹಿಳೆಯನ್ನು ಸಭೆಯ ಬಾಗಿಲಿನೊಳಗೆ ಕರೆತಂದು ಕುರ್ಚಿ ಕೊಡುವುದು ಸುಲಭ. ಆದರೆ ನಿರ್ಧಾರ ನಡೆಯುವ ಮೇಜಿನ ಬಳಿ ಆಕೆಗೆ ಸ್ಥಾನವಿಲ್ಲದಿದ್ದರೆ, ಆಕೆ ಕೊಠಡಿಯಲ್ಲಿದ್ದಾಳೆಆದರೆ ಅಧಿಕಾರದೊಳಗಿಲ್ಲ. ಎಂಬುದನ್ನು ಸಾರಿ ಹೇಳುತ್ತಿದೆ.

ರಾಜಕೀಯ ಸಮಾವೇಶದ ದೊಡ್ಡ ಪೆಂಡಾಲ್ ಕೆಳಗೆ, ಗಾಡಿ ಹತ್ತಿಸಿ ಕರೆತಂದ ಸಾವಿರಾರು ಮಹಿಳೆಯರತ್ತ ನಾಯಕರು ಕೈಬೀಸಿ, ''ಇಗೋ ನೋಡಿ, ನಮ್ಮದು ಮಹಿಳಾ ಪರವಾದ ಪಕ್ಷ'' ಎಂದು ಹೇಳಿಕೊಳ್ಳುವ ದೃಶ್ಯವನ್ನು ನಾವು ಆಗಾಗ್ಗೆ ಕಾಣುತ್ತೇವೆ. ಮಹಿಳೆಯರ ದೊಡ್ಡ ಗುಂಪನ್ನು ತೋರಿಸುವುದು ಮಹಿಳಾ ಸಬಲೀಕರಣದ ಸಾಕ್ಷಿಯಂತೆ ಪ್ರದರ್ಶಿಸಲಾಗುತ್ತದೆ.

ಸಂಖ್ಯೆ ಹೆಚ್ಚಾದರೆ ಸಬಲೀಕರಣವಾಗುತ್ತದೆಯೇ? ಆದರೆ, ಇಲ್ಲಿಯೇ ಪ್ರಶ್ನೆಗಳು ಕೇಳಬೇಕಾಗುತ್ತದೆ.

ಆ ಮಹಿಳೆಯರು ಸಮಾವೇಶದಲ್ಲಿ ಕಾಣಿಸಿಕೊಳ್ಳುತ್ತಿರುವುದಷ್ಟೇ ಮಹಿಳಾ ಸಬಲೀಕರಣವೇ?

ಅವರಲ್ಲಿ ಎಷ್ಟು ಜನರಿಗೆ ರಾಜಕೀಯದ ನಿರ್ಧಾರ ಪ್ರಕ್ರಿಯೆಯಲ್ಲಿ ಸ್ಥಾನವಿದೆ?

ಆಕೆಯ ಕೈಯಲ್ಲಿ ಪಕ್ಷದ ಧ್ವಜ ಇರಬಹುದು; ಆದರೆ ಪಕ್ಷದ ನೀತಿ ರೂಪಿಸುವ ಅಧಿಕಾರ ಆಕೆಯ ಕೈಯಲ್ಲಿದೆಯೇ?

ಆಕೆ ಸಾವಿರಾರು ಜನರ ನಡುವೆ ಕುಳಿತು ನಾಯಕನ ಮಾತಿಗೆ ಚಪ್ಪಾಳೆ ತಟ್ಟಬಹುದು; ಆದರೆ ಅದೇ ನಾಯಕನ ರಾಜಕೀಯ ನಿರ್ಧಾರವನ್ನು ಪ್ರಶ್ನಿಸುವ ಅವಕಾಶ ಆಕೆಗೆ ಇದೆಯೇ?

ಆಕೆಯನ್ನು ವೇದಿಕೆಯ ಕೆಳಗೆ ಸಾವಿರಾರು ಸಂಖ್ಯೆಯಲ್ಲಿ ತೋರಿಸಬಹುದು; ಆದರೆ ನಿರ್ಧಾರದ ಮೇಜಿನ ಬಳಿ ಎಷ್ಟು ಮಹಿಳೆಯರು ಕುಳಿತಿದ್ದಾರೆ?

ಮಹಿಳೆಯರ ದೃಶ್ಯವಲ್ಲ, ಅವರ ನಿರ್ಧಾರಾಧಿಕಾರವೇ ಮುಖ್ಯ

ಜನಸಾಗರದ ನಡುವೆ ಮಹಿಳೆ ಕಾಣಿಸಿಕೊಳ್ಳಬಹುದು; ಆದರೆ ಅಧಿಕಾರದ ನಕ್ಷೆಯಲ್ಲಿ ಆಕೆಯ ಹೆಸರು ಕಾಣಿಸದಿದ್ದರೆ, ಆ ದೃಶ್ಯ ಕೇವಲ ಸಂಖ್ಯೆಯ ಪ್ರದರ್ಶನವಾಗುತ್ತದೆ. ಇದು ಕೇವಲ ಒಂದು ಪಕ್ಷದ ಪ್ರಶ್ನೆಯಲ್ಲ. ಇದು, ಪುರುಷ ಪ್ರಧಾನ ರಾಜಕೀಯಯದ ಸಾಂಸ್ಕೃತಿಕ ಗಂಡಾಳ್ವಿಕೆಯ ಪ್ರಶ್ನೆ.

ಮಹಿಳಾ ಕಲ್ಯಾಣ ಮತ್ತು ಮಹಿಳಾ ರಾಜಕೀಯ ಸಬಲೀಕರಣ ಒಂದೇ ಅಲ್ಲ

ಪುರುಷ ರಾಜಕಾರಣಿಗಳು ಮಹಿಳೆಯರಿಗಾಗಿ ಅನೇಕ ಯೋಜನೆಗಳನ್ನು ತಂದಿದ್ದೇವೆ, ಮಹಿಳೆಯರಿಗೆ ಇಷ್ಟೊಂದು ಸೌಲಭ್ಯಗಳನ್ನು ನೀಡಿದ್ದೇವೆ, ನಮ್ಮದು ಮಹಿಳಾ ಪರವಾದ ಪಕ್ಷ ಎಂದು ಹೇಳಿಕೊಳ್ಳಬಹುದು. ಆ ಯೋಜನೆಗಳು ಮಹಿಳೆಯರ ಬದುಕಿಗೆ ಪ್ರಯೋಜನಕಾರಿಯಾಗಿರಬಹುದು. ಆದರೆ, ಮಹಿಳೆಯರಿಗಾಗಿ ಯೋಜನೆ ರೂಪಿಸುವುದು ಮತ್ತು ಮಹಿಳೆಯರನ್ನು ರಾಜಕೀಯವಾಗಿ ಸಬಲಗೊಳಿಸುವುದು ಎರಡೂ ಒಂದೇ ಅಲ್ಲ. ಮಹಿಳೆಗೆ ಏನು ಕೊಡಬೇಕು ಎಂದು ನಿರ್ಧರಿಸುವ ಕೈ ಮತ್ತು ಮಹಿಳೆಯೇ ಏನು ಬೇಕೆಂದು ನಿರ್ಧರಿಸುವ ಕೈಇವೆರಡರ ನಡುವೆ ಇರುವ ಅಂತರವೇ ಅಧಿಕಾರದ ಅಂತರ.

''ನಮಗೆ ಏನು ನೀಡಲಾಗಿದೆ?'' ಎಂಬ ಪ್ರಶ್ನೆಯ ಜೊತೆಗೆ ''ನಾವು ಏನು ನಿರ್ಧರಿಸುತ್ತಿದ್ದೇವೆ?'' ಎಂಬ ಪ್ರಶ್ನೆಯೂ ಬರಬೇಕು. ''ಯಾವ ಪಕ್ಷ ಮಹಿಳಾ ಪರ?'' ಎಂಬ ಪ್ರಶ್ನೆಯ ಜೊತೆಗೆ ''ಆ ಪಕ್ಷದೊಳಗೆ ಮಹಿಳೆಯರಿಗೆ ಎಷ್ಟು ನಿರ್ಧಾರಾಧಿಕಾರವಿದೆ?'' ಎಂಬ ಪ್ರಶ್ನೆಯೂ ಬರಬೇಕು.

ಮಹಿಳೆಯ ರಾಜಕೀಯ ಪ್ರಜ್ಞೆ ಏಕೆ ಮುಖ್ಯ?

ರಾಜಕೀಯ ಪ್ರಜ್ಞೆ ಎಂದರೆ ನಾಯಕರು ಹೇಳುವುದನ್ನು ತಿಳಿದುಕೊಂಡು ಪುನರಾವರ್ತಿಸುವುದು ಅಲ್ಲ. ರಾಜಕೀಯ ಪ್ರಜ್ಞೆ ಎಂದರೆ ಅಧಿಕಾರ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು; ನೀತಿಗಳನ್ನು ಪ್ರಶ್ನಿಸುವುದು; ತನ್ನ ಹಕ್ಕುಗಳನ್ನು ಅರಿಯುವುದು; ಜನರ ಸಮಸ್ಯೆಗಳನ್ನು ರಾಜಕೀಯ ಪ್ರಶ್ನೆಗಳಾಗಿ ಗುರುತಿಸುವುದು; ಪಕ್ಷದೊಳಗಿನ ನಿರ್ಧಾರ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು.

ಮಹಿಳೆಯ ಸಾಮರ್ಥ್ಯಕ್ಕೆ ರಾಜಕೀಯದಲ್ಲೇ ಏಕೆ ಅನುಮಾನ?

ಒಬ್ಬ ಮಹಿಳೆ ಯಶಸ್ವಿ ಉದ್ಯಮಿಯಾಗಬಲ್ಲಳು. , ನಂತಹ ಅತ್ಯಂತ ಜವಾಬ್ದಾರಿಯುತ ಸಾರ್ವಜನಿಕ ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಬಲ್ಲಳು. ವಿಜ್ಞಾನ, ಶಿಕ್ಷಣ, ವೈದ್ಯಕೀಯ, ಕಾನೂನು, ಸೇನೆ, ಆಡಳಿತ, ಉದ್ಯಮಎಲ್ಲ ಕ್ಷೇತ್ರಗಳಲ್ಲೂ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಬಲ್ಲಳು. ಹಾಗಾದರೆ ಅದೇ ಮಹಿಳೆ ರಾಜಕೀಯಕ್ಕೆ ಬಂದಾಗ ಮಾತ್ರ ಆಕೆಯ ಸಾಮರ್ಥ್ಯವನ್ನು ಏಕೆ ಅನುಮಾನಿಸಬೇಕು? ಎಂಬ ಪ್ರಶ್ನೆಯಲ್ಲಿಯೇ ಗಂಡಾಳ್ವಿಕೆಯ ಮುಖ ಪರಿಚಯವಾಗುತ್ತದೆ.

ಇಲ್ಲಿ ನಾವು ಶೋಧಿಸಬೇಕಾದದ್ದು, ಸಮಸ್ಯೆ ಮಹಿಳೆಯ ಸಾಮರ್ಥ್ಯದಲ್ಲೇ ಇದೆಯೇ? ಅಥವಾ ರಾಜಕೀಯದೊಳಗೆ ನಿರ್ಮಿಸಲ್ಪಟ್ಟಿರುವ ಗಂಡಾಳ್ವಿಕೆಯ ಅಧಿಕಾರದ ಸಂಸ್ಕೃತಿಯಲ್ಲಿದೆಯೇ? ಎಂಬುದನ್ನು.

ಮಹಿಳೆಯ ಕೈಗಳು ಶಸ್ತ್ರಚಿಕಿತ್ಸೆ ಮಾಡಬಲ್ಲವು, ಸಂಸ್ಥೆಯನ್ನು ಮುನ್ನಡೆಸಬಲ್ಲವು, ಆಡಳಿತ ನಡೆಸಬಲ್ಲವು; ಆದರೆ ರಾಜಕೀಯದ ಬಾಗಿಲಿಗೆ ಬಂದಾಗ ಅದೇ ಕೈಗೆ ಕೇವಲ ಧ್ವಜವನ್ನು ಕೊಟ್ಟು ನಿಲ್ಲಿಸುವುದೇಕೆ? ಇದು ಪ್ರಜ್ಞಾವಂತ ಮಹಿಳೆಯರನ್ನು ಕಾಡಬೇಕಾದ ಪ್ರಶ್ನೆ.

ಮಹಿಳೆ ಯಾರದೋ ರಾಜಕೀಯದ ನೆರಳಾಗಬೇಕೇ?

ಮಹಿಳೆಯನ್ನು ಕೇವಲ ಕಾರ್ಯಕರ್ತೆ, ಪ್ರಚಾರಕಿ, ಮತಸಂಗ್ರಹಕಿ ಅಥವಾ ನಾಯಕನ ಬೆಂಬಲಿಗ ಎಂಬ ಪಾತ್ರಗಳಲ್ಲೇ ಸೀಮಿತಗೊಳಿಸಿದರೆ, ಆಕೆಯ ಸಾಮರ್ಥ್ಯ ರಾಜಕೀಯ ಅಧಿಕಾರವಾಗಿ ರೂಪಾಂತರಗೊಳ್ಳಲು ಅವಕಾಶ ಸಿಗುವುದಿಲ್ಲ.

ಆದ್ದರಿಂದ ಮಹಿಳೆಯರು ಈಗ ತಮ್ಮನ್ನು ತಾವೇ ಕೇಳಿಕೊಳ್ಳಬೇಕಾದ ಪ್ರಶ್ನೆಗಳು: ''ನಾನು ರಾಜಕೀಯದಲ್ಲಿ ಯಾರಿಗಾಗಿ ಕೆಲಸ ಮಾಡುತ್ತಿದ್ದೇನೆ?'' ಎಂಬುದಷ್ಟೇ ಅಲ್ಲ''ನನ್ನ ರಾಜಕೀಯದಲ್ಲಿ ನನ್ನದೇ ಧ್ವನಿಗೆ ಆದ್ಯತೆ ಎಲ್ಲಿದೆ?''

ಮಹಿಳೆ ಯಾರದೋ ರಾಜಕೀಯದ ಸಂಖ್ಯೆಯಾಗಬೇಕಿಲ್ಲ. ಯಾರದೋ ಸಮಾವೇಶದ ದೃಶ್ಯವಾಗಬೇಕಿಲ್ಲ. ಯಾರದೋ ಪ್ರಚಾರದ ಸಾಧನವಾಗಬೇಕಿಲ್ಲ. ಅವಳು ಯಾರದೋ ರಾಜಕೀಯದ ನೆರಳಾಗಿ ನಿಲ್ಲಬೇಕಿಲ್ಲ; ತನ್ನದೇ ರಾಜಕೀಯದ ಬೆಳಕಾಗಬೇಕು. ಆಕೆ ತನ್ನದೇ ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ಪ್ರಶ್ನಿಸಬೇಕು. ಚರ್ಚಿಸಬೇಕು. ನಿರ್ಧರಿಸಬೇಕು. ನಾಯಕತ್ವ ವಹಿಸಬೇಕು.

ಮಹಿಳೆಯನ್ನು ರಾಜಕೀಯಕ್ಕೆ ಕರೆತರುವುದು ಮೊದಲ ಹೆಜ್ಜೆ. ಆಕೆಗೆ ರಾಜಕೀಯ ಪ್ರಜ್ಞೆ ನೀಡುವುದು ಎರಡನೇ ಹೆಜ್ಜೆ. ಆಕೆಯ ಸ್ವತಂತ್ರ ಧ್ವನಿಯನ್ನು ಬೆಳೆಸುವುದು ಮೂರನೇ ಹೆಜ್ಜೆ. ಆದರೆ ಆಕೆಯ ಧ್ವನಿಗೆ ನಿರ್ಧಾರಾಧಿಕಾರ ನೀಡುವುದೇ ಮಹಿಳೆಯ ನಿಜವಾದ ರಾಜಕೀಯ ಸಬಲೀಕರಣ.

ಈ ರಾಜಕೀಯದಲ್ಲಿ ಗಂಡಾಳ್ವಿಕೆಯ ಸಂಸ್ಕೃತಿಯನ್ನು ಬದಲಾಯಿಸಲು ಇಡಬೇಕಾದ ಮೊದಲ ಹೆಜ್ಜೆ, ಮಹಿಳೆ ತನ್ನನ್ನು ಕೇವಲ ರಾಜಕೀಯದ ಭಾಗವಹಿಸುವವಳಾಗಿ ಅಲ್ಲ, ನಿರ್ಧಾರ ತೆಗೆದುಕೊಳ್ಳುವ ಹಕ್ಕುದಾರಳಾಗಿ ಅರಿತುಕೊಳ್ಳುವುದಾಗಿದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR